# ವಿಶೇಷ ಪುರವಣಿ

# ವಿವೇಕ ಯುವಚೇತನ ಶಿಬಿರ

(೨೦೧೩ರ ಸೆಪ್ಟೆಂಬರ್ ೨೩ ರಿಂದ ೨೫)



## ವಿವೇಕ ಯುವಚೇತನ ಶಿಬಿರ – ಪರಿಕಲ್ಪನೆ ಹಾಗೂ ಆವಶ್ಯಕತೆ

ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. ೬೦ಕ್ಕಿಂತಲೂ ಅಧಿಕವಾಗಿ ಯುವಜನತೆಯಿದ್ದು, ಭಾರತವು ಈ ಯುವ ಶಕ್ತಿಯ ಒಂದು ಸಮೃದ್ಧ ತಾಣವಾಗಿದೆ. ಹಾಗೆಂದೇ ನಮ್ಮ ದೇಶದ ಭವಿಷ್ಯ ಉಜ್ವಲವಾಗಬೇಕಾದರೆ, ನಾವು ಒಂದು ಆದರ್ಶ ಮತ್ತು ಸಂಪದ್ಭರಿತ ಸಮಾಜವಾಗಿ ಮೂಡಿಬರಬೇಕಾದರೆ, ಈ ಯುವಶಕ್ತಿಯನ್ನು ಕ್ರೋಡೀಕರಿಸಬೇಕು. ಆಮೂಲಕ ಅದನ್ನು ಸಕಾರಾತ್ಮಕವಾದ ಶಕ್ತಿಯಾಗಿ ರೂಪಿಸಲು ಅದಕ್ಕೊಂದು ಸುಸಂಸ್ಕೃತ ದೃಷ್ಟಿಕೋನವನ್ನು ಒದಗಿಸಬೇಕು. ಅದಕ್ಕೆ ಅಗತ್ಯವಾದ ಬೌದ್ಧಿಕ, ನೈತಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಉನ್ನತ ಮೌಲ್ಯಗಳನ್ನು ಒಳಗೊಂಡ ಯೋಗ್ಯಶಿಕ್ಷಣ, ತರಬೇತಿ ಹಾಗೂ ಅವಕಾಶಗಳನ್ನು ಕಲ್ಪಿಸಿಕೊಡುವ ಜವಾಬ್ದಾರಿ ಹಿರಿಯರಾದ ನಮ್ಮ ಮೇಲೆಯೇ ಇದೆ.

ಮೊತ್ತಮೊದಲು, ಇಂದಿನ ಕಲುಷಿತ ವಾತಾವರಣದಲ್ಲಿ ಜನಿಸಿ ಬೆಳೆಯುವ ಒಂದು ಮಗು ತನ್ನ ವ್ಯಕ್ತಿತ್ವದ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವಲ್ಲಿ ಎದುರಿಸಬೇಕಾದ ಸಾಂಸ್ಕೃತಿಕ, ಸಾಮಾಜಿಕ, ಕೌಟುಂಬಿಕ ಹಾಗೂ ಮೌಲಿಕ ಸವಾಲುಗಳನ್ನು ಹಾಗೂ ಅವುಗಳ ಸಂಕೀರ್ಣತೆ ಮತ್ತು ವಿವಿಧ ಆಯಾಮಗಳನ್ನು ನಾವು ಅರ್ಥೈಸಿಕೊಳ್ಳಬೇಕು. ಸದ್ಯದ ಪರಿಸ್ಥಿತಿಯಲ್ಲಿ ಹೊರಜಗತ್ತಿನಲ್ಲಿ ಯುವಕರಿಗೆ ಸಿಕ್ಕದಿರುವ ಅರ್ಥಪೂರ್ಣ ಮಾರ್ಗದರ್ಶನ, ಪರಿಣಾಮಕಾರಿ ನಾಯಕತ್ವ, ಮಾನಸಿಕ ಶಕ್ತಿವರ್ಧಕ ಹಾಗೂ ಮೌಲ್ಯಾಧಾರಿತ ಆದರ್ಶ – ಇವೆಲ್ಲವುಗಳ ಕೊರತೆಗಳನ್ನು ನಾವು ಅರಿತುಕೊಳ್ಳಬೇಕು. ಅವರ ಮಾನಸಿಕ ಮತ್ತು ಕಾರ್ಯವೈಖರಿಯ ತುಮುಲಗಳನ್ನು ನಾವು ಗಂಭೀರವಾಗಿ ಪರಿಶೀಲಿಸಬೇಕು. ಯುವಕರ ವೈಫಲ್ಯಗಳಿಗಾಗಿ ಅವರನ್ನು ದೂಷಿಸಿ ಕಡೆಗಣಿಸುವ ಬದಲು, ಅಂತಹ ಕಷ್ಟಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಒಂದು ನಿರ್ದಿಷ್ಟ ಕಾರ್ಯಪ್ರಣಾಳಿಯನ್ನು ರೂಪಿಸುವ ಜವಾಬ್ದಾರಿ ನಮ್ಮ ಮೇಲೇ ಇದೆ.

Garbage in, garbage out ಎನ್ನುವ ಹಾಗೆ ಯುವಕ ಯುವತಿಯರು ಇಂದಿನ ಸಮಾಜದಿಂದ, ಶಿಕ್ಷಣ ಪ್ರಕ್ರಿಯೆಯಿಂದ ಮತ್ತು ನಾಯಕತ್ವದ ಮಾದರಿಗಳಿಂದ ಏನನ್ನು ಗ್ರಹಿಸುತ್ತಾರೋ, ಅವರ ವೈಯಕ್ತಿಕ ಹಾಗೂ ಸಾಮಾಜಿಕ ನಡೆವಳಿಕೆಗಳು ಕೂಡ ಅದನ್ನೇ ಪ್ರತಿಫಲಿಸುತ್ತವೆ. ನಮ್ಮ ಇಂದಿನ ಸುತ್ತಮುತ್ತಲಿನ ವಾತಾವರಣದಲ್ಲಿ ವೈರಾಣುಗಳಂತೆ ಆಕ್ರಮಿಸಿಕೊಂಡಿರುವ ಟಿ.ವಿ. ಸಿನಿಮಾ ಮತ್ತಿತರ ದೃಶ್ಯಮಾಧ್ಯಮಗಳು, ಮೊಬೈಲ್‌ಫೋನ್, ಅಂತರ್ಜಾಲದಂತಹ ತಾಂತ್ರಿಕ ಮಾಧ್ಯಮಗಳು ಯುವಕರ ಮನಸ್ಸನ್ನು ಅಪಕ್ವ ಮನೋರಂಜನೆ, ಅಸಹ್ಯ ಭೋಗವಿಲಾಸಗಳು ಹಾಗೂ ಅತೀವ ಕ್ರೌರ್ಯಕ್ಕೆ ತೆರೆದಿಟ್ಟಿವೆ. ಅವರ ವ್ಯಕ್ತಿತ್ವವನ್ನೇ ಬಲಿತೆಗೆದುಕೊಂಡು ಅವರನ್ನು ದುರ್ಬಲರನ್ನಾಗಿಯೂ, ವಿವೇಕಹೀನರನ್ನಾಗಿಯೂ, ಆತ್ಮಗೌರವಶೂನ್ಯರನ್ನಾಗಿಯೂ, ತಮ್ಮ ಭವಿಷ್ಯದ ಬಗೆಗೆ ಸ್ಪಷ್ಟ ಕಲ್ಪನೆಯಿಲ್ಲದವರನ್ನಾಗಿಯೂ ಮಾಡಿ ಬಿಟ್ಟಿವೆ. ಆಮೂಲಕ ನಮ್ಮ ಇಂದಿನ ಯುವಕರು ಅವನತಿಯ ಮಾರ್ಗದಲ್ಲಿ ಜಾರುವಂತೆ ಮಾಡಿವೆ. ಈ ಅಧೋಗತಿಯ ಮಾರ್ಗದಿಂದ ನಮ್ಮ ಯುವಮಿತ್ರರನ್ನು ವಿಮುಖರನ್ನಾಗಿಸಿ ಸನ್ಮಾರ್ಗದಲ್ಲಿ ಪ್ರವೃತ್ತರನ್ನಾಗಿ ಮಾಡಲು ಬೇಕಾದ ಸಕಾರಾತ್ಮಕವಾದ ಪೂರಕ (Complementary) ಶಿಕ್ಷಣ ಹಾಗೂ ತರಬೇತಿ ಪ್ರಣಾಳಿಕೆಗಳನ್ನು ರೂಪಿಸಲು ಈಗಾಗಲೇ ಸಾಕಷ್ಟು ಸಮಯ ಮಿಂಚಿಹೋಗಿದೆ ಎಂದು ಕೈಕಟ್ಟಿ ಕೂರುವಂತಿಲ್ಲ.

ಈ ಕಷ್ಟಸಾಧ್ಯ ಕಾರ್ಯದ ಜವಾಬ್ದಾರಿ ಸಮಾಜದ ಯಾವುದೇ ಒಂದು ಭಾಗಕ್ಕೆ ಸೀಮಿತವಾಗಿಲ್ಲ. ಮನೆಯಲ್ಲಿ ಹಿರಿಯರು, ಶಾಲಾಕಾಲೇಜುಗಳ ಅಧ್ಯಾಪಕವೃಂದ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ಷೇತ್ರಗಳಲ್ಲಿ ಸಕ್ರಿಯರಾಗಿರುವವರು, ಮಠಮಾನ್ಯಗಳು – ಹೀಗೆ ಸಮಾಜದ ಎಲ್ಲ ಹಿರಿಯರೂ ಈ ಅವಶ್ಯಕ ಕಾರ್ಯದಲ್ಲಿ ಉತ್ಸಾಹದಿಂದ, ಜವಾಬ್ದಾರಿಯಿಂದ ಮತ್ತು ಅತ್ಯಂತ ತಾಳ್ಮೆಯಿಂದ ದುಡಿಯಲು ಮುಂದೆ ಬರಬೇಕು.

ಒಂದೇ ಮಾತಿನಲ್ಲಿ ಹೇಳುವುದಾದರೆ ನಮ್ಮ ಯುವಶಕ್ತಿಯು ನಮ್ಮ ಆಸ್ತಿ ಹೇಗೋ ಹಾಗೇ ಅದನ್ನು ತಿದ್ದಿ, ತೀಡಿ ಸರಿಯಾದ ದಾರಿಯಲ್ಲಿ ಪ್ರವಹಿಸುವಂತೆ ಮಾಡುವುದು ಕೂಡ ನಮ್ಮ

ಜವಾಬ್ದಾರಿಯೇ ಆಗಿದೆ. ನಾವೆಲ್ಲರೂ, ಈ ದಿಸೆಯಲ್ಲಿ ಶ್ರಮಿಸುತ್ತಿರುವ ವ್ಯಕ್ತಿಗಳು, ಮಾಧ್ಯಮಗಳು ಹಾಗೂ ಸರಕಾರಿ ಮತ್ತು ಸರಕಾರೇತರ ಸಂಘಸಂಸ್ಥೆಗಳ ಜೊತೆಗೆ ಹೆಗಲಿಗೆ ಹೆಗಲು ಕೊಟ್ಟು, ವಿಳಂಬವಿಲ್ಲದೆ ದುಡಿಯುವುದು ಈ ಸಮಸ್ಯೆಯ ಪರಿಹಾರಕ್ಕೆ ಇರುವ ಒಂದೇ ದಾರಿ. ನಾವು ನಮ್ಮ ಭವ್ಯ ಪರಂಪರೆಯಿಂದ ಆಧ್ಯಾತ್ಮಿಕವಾಗಿ, ಬೌದ್ಧಿಕವಾಗಿ ದೂರ ಸರಿಯುವಂತೆ ಮಾಡಿರುವ ಈಗಿನ ಶಾಲೆಗಳು, ವಿಶ್ವವಿದ್ಯಾನಿಲಯಗಳು ನಮ್ಮ ಯುವಜನಾಂಗಕ್ಕೆ ತನ್ನದೇ ಆದ ಸಂಸ್ಕೃತಿಯ ಹಿರಿಮೆಯನ್ನು ಗುರುತಿಸುವ ಹಾಗೂ ಸ್ವಂತಿಕೆಯನ್ನು ಬೆಳೆಸಿಕೊಳ್ಳಬಲ್ಲ ಉನ್ನತ ಅಭೀಪ್ಸೆ, ಚೈತನ್ಯ ಮತ್ತು ತ್ರಾಣಗಳನ್ನೇ ನಷ್ಟವಾಗಿಸಿಬಿಟ್ಟಿವೆ. ಈ ಪ್ರಕ್ರಿಯೆಯನ್ನು ಹಿಮ್ಮುಖಗೊಳಿಸಿ (reverse the process) ನಾವು ಕಳೆದುಕೊಂಡಿರುವುದನ್ನು ಮತ್ತೆ ಗಳಿಸಲು ದುಡಿಯುವುದೇ ನಮ್ಮ ಆದ್ಯತೆಯಾಗಬೇಕಿದೆ.

ಬಾಲ್ಯದಿಂದಲೇ ಮಕ್ಕಳ ಬುದ್ಧಿಶಕ್ತಿ (intellect), ಭಾವನೆ (emotions) ಮತ್ತು ಇಚ್ಛಾಶಕ್ತಿಗಳನ್ನು (will-power) ಸಮಾಜಮುಖಿಯನ್ನಾಗಿ ಮಾಡುವುದು ಅತ್ಯವಶ್ಯ. ಅದಕ್ಕಾಗಿ ಅವರಲ್ಲಿ ಸೇವಾಭಾವನೆ, ನೈತಿಕತೆ, ಆಧ್ಯಾತ್ಮಿಕತೆ, ಜ್ಞಾನದಾಹ, ಸ್ವಾರ್ಥತ್ಯಾಗ ಮುಂತಾದ ಸದ್ಗುಣಗಳ ಅಂಕುರಾರ್ಪಣೆ ಮಾಡಿ ಅವುಗಳನ್ನು ವೃದ್ಧಿಸಲು ಬೇಕಾದ ವಾತಾವರಣ ಮತ್ತು ಸಲಕರಣೆಗಳನ್ನು ಸೃಷ್ಟಿಸಬೇಕು.

ಈ ವಿಚಾರಧಾರೆಯ ಹಿನ್ನೆಲೆಯಲ್ಲಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮವು ಹಮ್ಮಿಕೊಂಡಿದ್ದ ಹಲವು ಪ್ರಮುಖ ಕಾರ್ಯಕ್ರಮಗಳಲ್ಲಿ ೨೦೧೩ರ ಸೆಪ್ಟೆಂಬರ್ ೨೩ರಿಂದ ೨೫ರವರೆಗೆ ನಡೆದ 'ವಿವೇಕ ಯುವಚೇತನ ಶಿಬಿರ' ದ ಸಂಘಟನೆಯೂ ಒಂದಾಗಿತ್ತು. ಮೂರು ದಿನಗಳ ಈ ಶಿಬಿರವು ಗ್ರಾಮಾಂತರ ಪ್ರದೇಶಗಳ, ಹಾಗೂ ನಗರಗಳಲ್ಲಿರುವ ಪದವಿಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಮೀಸಲಾಗಿತ್ತು. ಇದಲ್ಲದೆ, ಈ ಶಿಬಿರದ ಉದ್ದೇಶಕ್ಕೆ ಪೂರಕವಾಗಿ **'ವಿವೇಕ ಭಾರತ ದರ್ಶನ', 'ಮಹಾಪುರುಷರ ಸಂಸ್ಕಾರ ಸೌರಭ', 'ಸೇವಾದೀಕ್ಷೆ', 'ವಿವೇಕದೀಕ್ಷೆ', 'ಗ್ರಾಮೀಣ ಪ್ರದೇಶಗಳಲ್ಲಿ ಗುಡಿಸಿಲಿನ ರೂಪದಲ್ಲಿರುವ ಭಗವಾನ್ ಶ್ರೀರಾಮಕೃಷ್ಣರ ದೇಗುಲ ಸ್ಥಾಪನೆ'** (Hut temple of Sri Ramakrishna), **'ದೀನಜನರ ಬಂಧು'**(Friends of the poor), **'ಮೌಲಿಕ ಚಿಂತನೆಗಳ ಶೋಧನೆ'** (Search for Great ideas) ಮುಂತಾದ ಅನೇಕ ಆಯಾಮಗಳಿರುವ ಸೇವಾ ಕಾರ್ಯಗಳನ್ನೂ ಭವಿಷ್ಯದಲ್ಲಿ ಹಮ್ಮಿಕೊಳ್ಳಲಾಗಿದೆ. ಆಮೂಲಕ ಯುವಶಕ್ತಿಯನ್ನು ಸಂಚಯಿಸಿ, ಉಳಿಸಿ, ಬೆಳೆಸಿ ಅದನ್ನು ರಾಷ್ಟ್ರದ ಚೈತನ್ಯ ಮತ್ತು ದೊಡ್ಡ ಸಂಪನ್ಮೂಲವನ್ನಾಗಿ ಮಾಡುವ ಸತ್ಸಂಕಲ್ಪದಿಂದ ಕೈಗೊಂಡಿದ್ದ ಒಂದು ಪ್ರಾಮಾಣಿಕ ಪ್ರಯತ್ನವೇ 'ವಿವೇಕ ಯುವಚೇತನ ಶಿಬಿರ'.

**ಈ ಶಿಬಿರದ ಧ್ಯೇಯೋದ್ದೇಶಗಳು ಹೀಗಿದ್ದವು:**

೧. ತರುಣರ ವ್ಯಕ್ತಿತ್ವ ವಿಕಸನಕ್ಕೆ ಅನುಕೂಲವಾಗುವಂತಹ ಜೀವನ ಕೌಶಲ್ಯಗಳಲ್ಲಿ ತರಬೇತಿ.

೨. ಜೀವನದಲ್ಲಿ ಉನ್ನತ ಮೌಲ್ಯಗಳನ್ನು ಹಾಗೂ ಆಧ್ಯಾತ್ಮಿಕ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗುವ ಶಿಕ್ಷಣ.

೩. ವೈಚಾರಿಕ ಹಾಗೂ ಸೈದ್ಧಾಂತಿಕವಾಗಿ ಯಶಸ್ವೀ ಜೀವನವನ್ನು ನಡೆಸಲು ಅಗತ್ಯವಾದ ಸ್ಫೂರ್ತಿ ತುಂಬುವ ಕಾರ್ಯಕ್ರಮಗಳು.

೪. ರಾಷ್ಟ್ರಪ್ರೇಮ ಮತ್ತು ಉದಾತ್ತ ವಿಶ್ವಮಾನವ ದೃಷ್ಟಿಕೋನವನ್ನು ಸ್ಫುರಿಸಲು ಸಹಕರಿಸುವ ಪ್ರವಚನಗಳು ಮತ್ತು ಪ್ರಯೋಗಗಳು.

೫. ವಿವೇಕಾನಂದರ ಜೀವನ ಮತ್ತು ಸಂದೇಶಗಳ ಪರಿಚಯ.

೬. ಶಿಬಿರದ ಅಂತ್ಯದಲ್ಲಿ ಆಯ್ದ ತರುಣರಿಗೆ ಸ್ವಾಮಿ ವಿವೇಕಾನಂದರ ಜೀವನ ಮತ್ತು ಚರಿತ್ರೆಗೆ ಸಂಬಂಧಪಟ್ಟ ಪುಣ್ಯಸ್ಥಳಗಳಿಗೆ ಶೈಕ್ಷಣಿಕ ಸಂದರ್ಶನ ('ವಿವೇಕಭಾರತ ದರ್ಶನ').

ಈ ಶಿಬಿರಕ್ಕೆ ಅಭ್ಯರ್ಥಿಗಳಿಗೆ ಯಾವುದೇ ಶುಲ್ಕವನ್ನು ವಿಧಿಸಲಾಗಿರಲಿಲ್ಲ. ಕರ್ನಾಟಕದಾದ್ಯಂತ ಇರುವ ಸುಮಾರು ೧೦೦ಕ್ಕೂ ಹೆಚ್ಚು ಪದವಿ ಕಾಲೇಜುಗಳಿಂದ, ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಿಂದ ವಿದ್ಯಾರ್ಥಿಗಳು ಆಗಮಿಸಿದ್ದರು. ಈ ಶಿಬಿರಕ್ಕೆ ತಲುಪಿ ಶಿಬಿರದಿಂದ ನಿರ್ಗಮಿಸುವವರೆಗೂ ಶಿಬಿರಾರ್ಥಿಗಳಿಗೆ ಅಗತ್ಯವಿರುವ ವಸತಿ ಮತ್ತು ಊಟೋಪಚಾರಗಳನ್ನು ಒದಗಿಸಲಾಗಿತ್ತು. ಇದಲ್ಲದೆ ಅವರಿಗೆ ಬಂದುಹೋಗುವ ಪ್ರಯಾಣದ ವೆಚ್ಚವನ್ನೂ ನೀಡಲಾಗಿತ್ತು.

ಈ ಶಿಬಿರದಲ್ಲಿ ನುರಿತ ಮತ್ತು ಪ್ರಾವೀಣ್ಯತೆ ಹೊಂದಿರುವ ಸಂಪನ್ಮೂಲ ವ್ಯಕ್ತಿಗಳು ಹಾಗೂ ಹಿರಿಯ ಯತಿಗಳ ಮಾರ್ಗದರ್ಶನದಲ್ಲಿ ಸಾಮಾನ್ಯ ದೈಹಿಕ ವ್ಯಾಯಾಮ, ಧ್ಯಾನ ತರಗತಿಗಳು, ಆಧ್ಯಾತ್ಮಿಕ ಪ್ರವಚನಗಳು, ಜೀವನ ಕೌಶಲ್ಯ ತರಬೇತಿ ಮತ್ತು ಆಪ್ತ ಸಮಾಲೋಚನೆಗಳನ್ನು ನೀಡಲಾಯಿತು. ಇದು ಈ ಶಿಬಿರದ ಅತ್ಯಂತ ಮಹತ್ವದ ಅಂಶ.

ಈ ಶಿಬಿರದಲ್ಲಿ ಪಾಲ್ಗೊಂಡ ತರುಣರಲ್ಲಿ, ಮುಖ್ಯವಾಗಿ ಶ್ರೀರಾಮಕೃಷ್ಣ ವಿವೇಕಾನಂದರ ಬೋಧಪ್ರದ ವಿಚಾರಗಳನ್ನು ತಿಳಿಯಲು ಎಷ್ಟು ಹಂಬಲವಿದೆ ಹಾಗೂ ಅವರಲ್ಲಿ ಸಾಮಾಜಿಕ ಪ್ರಜ್ಞೆ ಎಷ್ಟು ಜಾಗೃತವಾಗಿದೆ ಎಂಬುದನ್ನು ಅರಿಯಲು ಒಂದು ಪರಾಮರ್ಶಕ ಅಧಿವೇಶನವೂ ಇತ್ತು. ಇದರಲ್ಲಿ ಲಿಖಿತ ಪರೀಕ್ಷೆಯ ಜೊತೆಜೊತೆಗೆ ಕೆಲವು ವೈಚಾರಿಕ ಅಂಶಗಳನ್ನು (themes) ಕುರಿತು ಯುವವಿದ್ಯಾರ್ಥಿಗಳೇ ವಿಚಾರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಲಾಗಿತ್ತು. ಆ ವಿಷಯಗಳು ಹೀಗಿವೆ:

**೧. ಪ್ರಸಕ್ತ ಆರ್ಥಿಕ ಸಮಸ್ಯೆಗಳಿಗೆ ಸ್ವಾಮಿ ವಿವೇಕಾನಂದರ ಪರಿಹಾರಗಳು.**

**೨. ಸ್ವಾಮಿ ವಿವೇಕಾನಂದರಿಂದ – ಅವರೊಬ್ಬ ವ್ಯಕ್ತಿಯಾಗಿ ಹಾಗೂ ಸಾಧುವಾಗಿ–ನಾನು ಹೇಗೆ ಪ್ರಭಾವಿತನಾಗಿದ್ದೇನೆ ?**

**೩. ಸ್ವಾಮಿ ವಿವೇಕಾನಂದರು ಗುರುಶಿಷ್ಯ ಪರಂಪರೆಯ ಒಂದು ಅಮೂಲ್ಯ ರತ್ನ.**

**೪. ಸ್ವಾಮಿ ವಿವೇಕಾನಂದರು ಒಬ್ಬ ತುಂಟ ಹುಡುಗನಿಂದ 'ಭಾರತದ ಆತ್ಮ' ಎಂದು ಗುರುತಿಸಲ್ಪಡುವಷ್ಟುಮಟ್ಟಿಗೆ ಬೆಳೆದುಬಂದ ದಾರಿ.**

**೫. ೨೧ನೇ ಶತಮಾನಕ್ಕೆ ಸ್ವಾಮಿ ವಿವೇಕಾನಂದರ ಜೀವನದೃಷ್ಟಿಯ ಪ್ರಸ್ತುತತೆ.**

**೬. ಸ್ವಾಮಿ ವಿವೇಕಾನಂದರು ಒಬ್ಬ ವಾಸ್ತವವಾದಿ ತತ್ತ್ವಜ್ಞಾನಿ.**

**೭. ಸ್ವಾಮಿ ವಿವೇಕಾನಂದರು ಓರ್ವ ವೇದಾಂತಿ ಮಾನವತಾವಾದಿ.**

**೮. ದಲಿತ, ದುರ್ಬಲ ಮತ್ತು ದೀನರ ಬಗ್ಗೆ ಸ್ವಾಮಿ ವಿವೇಕಾನಂದರ ಕಳಕಳಿ.**

# ವಿವೇಕ ಯುವಚೇತನ ಶಿಬಿರದ ಪ್ರಾಸ್ತಾವಿಕ ನುಡಿಗಳು

ಸ್ವಾಮಿ ಮುಕ್ತಿದಾನಂದ

**ಪೂಜ್ಯ ಸ್ವಾಮೀಜಿಯವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು. ದೇಶದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಯಾದ ಮೈಸೂರಿನ 'ಶ್ರೀರಾಮಕೃಷ್ಣ ವಿದ್ಯಾಶಾಲೆ'ಯಲ್ಲಿ ಎರಡು ದಶಕಗಳಿಗೂ ಹೆಚ್ಚು ಸೇವೆ ಸಲ್ಲಿಸಿರುವ ಸ್ವಾಮೀಜಿಯವರು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವವರು. ಉತ್ತಮ ಭಾಷಣಕಾರರಾಗಿರುವ ಸ್ವಾಮೀಜಿಯವರು ಹಲವು ಲೇಖನಗಳನ್ನು ಮತ್ತು ಪುಸ್ತಕಗಳನ್ನು ಬರೆದಿದ್ದಾರೆ.**

**ಭ**ಗವಾನ್ ಶ್ರೀರಾಮಕೃಷ್ಣ ಹಾಗೂ ಸ್ವಾಮಿ ವಿವೇಕಾನಂದರ ವೈಚಾರಿಕ ಭಾವಧಾರೆಯ ಈ ಒಂದು ಪವಿತ್ರ ವಾತಾವರಣದಲ್ಲಿ ನೀವೆಲ್ಲ ಬಂದು ಸೇರಿರುವುದು ನಮಗೆಲ್ಲರಿಗೂ ಬಹಳ ಸಂತೋಷದ ವಿಷಯ. ನೀವು ಬಂದೊಡನೆಯೇ ಒದಗಿಸಲಾದ ಕೆಲವು ಕಿರುಪುಸ್ತಕಗಳನ್ನು ನೀವೆಲ್ಲ ಓದಲು ತೊಡಗಿದ್ದೀರಿ ಎಂದು ಭಾವಿಸುತ್ತೇನೆ. ಆ ಪುಸ್ತಕಗಳಲ್ಲಿನ ವಿಚಾರಗಳನ್ನು ವಿಶದಪಡಿಸುವಂತಿರುವ ಪೂಜ್ಯ ಸ್ವಾಮೀಜಿಗಳ ಮತ್ತು ಹಿರಿಯರ ಮಾತುಗಳನ್ನು ನೀವು ಇನ್ನು ಮೂರು ದಿನಗಳ ಕಾಲ ಆಲಿಸಲಿದ್ದೀರಿ. ಆಮೂಲಕ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯದ ಬಗ್ಗೆ ಮತ್ತು ಆ ಸಂಸ್ಕೃತಿಯ ಜೀವದಾಯಕ ವಿಚಾರಗಳು ಹೇಗೆ ಶ್ರೀರಾಮಕೃಷ್ಣ ವಿವೇಕಾನಂದರ ಚಿಂತನೆಗಳಲ್ಲಿ ಪ್ರತಿಧ್ವನಿತವಾಗಿವೆ ಎಂಬುದನ್ನು ನೀವು ಸ್ವಲ್ಪಮಟ್ಟಿಗಾದರೂ ಅರ್ಥ ಮಾಡಿಕೊಳ್ಳುತ್ತೀರಿ ಎಂದು ಆಶಿಸುತ್ತೇನೆ.

ಸ್ವಾಮಿ ವಿವೇಕಾನಂದರು ತಮ್ಮ ಚಿಂತನೆ-ಸಾಧನೆಗಳಿಂದ ಒಂದು ದೊಡ್ಡ ಬಳುವಳಿಯನ್ನು ನಮಗೆಲ್ಲ ಬಿಟ್ಟುಹೋಗಿದ್ದಾರೆ. ಆ ಕೊಡುಗೆಯನ್ನು ಉಳಿಸಿ-ಬೆಳೆಸುವ ಒಂದು ದೊಡ್ಡ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನೀವೆಲ್ಲರೂ ಈ ಅಪೂರ್ವವಾದ ಸಂಪತ್ತನ್ನು ಕಾಪಾಡಿಕೊಂಡು ನಿಮ್ಮ ಬಾಳನ್ನು ಸಾರ್ಥಕಗೊಳಿಸಿಕೊಳ್ಳುತ್ತೀರಿ ಎಂಬ ವಿಶ್ವಾಸ ನಮ್ಮದು.

ಸ್ವಾಮಿ ವಿವೇಕಾನಂದರು ಭಟ್ಟಿಯಿಳಿಸಿದ ಭಾರತವೇ ಆಗಿದ್ದರು. ಅವರು ಭಾರತದ ಆತ್ಮವೇ ಸರಿ. ಏಕೆಂದರೆ, ವಿವೇಕಾನಂದರನ್ನು ಬಿಟ್ಟು ಭಾರತವಿಲ್ಲ, ಭಾರತವನ್ನು ಬಿಟ್ಟು ವಿವೇಕಾನಂದರಿಲ್ಲ.

ಈ ಶಿಬಿರದ ಉದ್ದೇಶವನ್ನು ಬಹಳ ಸರಳವಾದ ಮಾತುಗಳಲ್ಲಿ ಹೀಗೆ ಹೇಳಬಹುದು: ಇದು ಶ್ರೀರಾಮಕೃಷ್ಣ ವಿವೇಕಾನಂದ ಪರಂಪರೆಯ ಸವಿಯನ್ನು – ಒಂದು ಆಧ್ಯಾತ್ಮಿಕ ವಾತಾವರಣದಲ್ಲಿ ನಿಮಗೆ ನೀಡುವ ಒಂದು ಸಣ್ಣ ಪ್ರಯತ್ನವಷ್ಟೇ.

ಶ್ರೀರಾಮಕೃಷ್ಣ-ವಿವೇಕಾನಂದರ ಕ್ರಾಂತಿಕಾರಕ ವಿಚಾರಗಳು – ಚಿಕಾಗೋ ನಗರದಲ್ಲಿ ೧೨೦ ವರ್ಷಗಳ ಹಿಂದೆ ವಿವೇಕಾನಂದರು ಮಾತನಾಡಿದ ದಿನದಿಂದ – ಇಂದಿನವರೆಗೂ ಜಾಗತಿಕ ಮಟ್ಟದಲ್ಲಿ ಒಂದು ಸಂಚಲನವನ್ನೇ ಉಂಟುಮಾಡಿವೆ. ನಮ್ಮ ಅರಿವಿಗೇ ಬಾರದಂತೆ ಇಡೀ ಪ್ರಪಂಚವನ್ನೇ, ಜನರ ಜೀವನವನ್ನೇ ರಚನಾತ್ಮಕವಾಗಿ ಬದಲಿಸುತ್ತಿವೆ.

ನೀವೆಲ್ಲರೂ ಈ ಆಶ್ರಮದ ಸುತ್ತಮುತ್ತ ಸೂಕ್ಷ್ಮವಾಗಿ ಕಣ್ಣು ಹಾಯಿಸಿದರೆ, ವಿಶೇಷವಾಗಿ ನಿಮಗೆ ಕಂಡುಬರುವುದು ಶ್ರೀರಾಮಕೃಷ್ಣ ವಿವೇಕಾನಂದ ವಿಚಾರಧಾರೆಗೆ ತಮ್ಮನ್ನೇ ಅರ್ಪಿಸಿಕೊಂಡಿರುವ ಸಂನ್ಯಾಸಿವೃಂದ, ಸ್ವಯಂಸೇವಕರು ಹಾಗೂ ಭಕ್ತವೃಂದ. ಇವರೆಲ್ಲರೂ ಸದ್ದುಗದ್ದಲವಿಲ್ಲದೆ ಹೇಗೆ ಮೌನವಾಗಿ ಕಾರ್ಯನಿರತರಾಗಿದ್ದಾರೆ ಎಂಬುದನ್ನು ನೀವು ಕಣ್ಣಾರೆ ಕಾಣಬಹುದು.

ಈ ಆಶ್ರಮದ ಒಂದು ವಿಶೇಷ ಆಕರ್ಷಣೆಯೆಂದರೆ ಇಲ್ಲಿನ ಪುಸ್ತಕ ಮಳಿಗೆ. ಅದ್ಭುತ ವಿಚಾರಗಳನ್ನೊಳಗೊಂಡ ಅನೇಕ ಪುಸ್ತಕಗಳನ್ನು ಈ ಮಳಿಗೆಯಲ್ಲಿ ನೀವು ನೋಡಬಹುದು. ನಿಮ್ಮ ಜೀವನದ ದಿಕ್ಕನ್ನೇ ಬದಲಿಸಬಲ್ಲ ಅನೇಕ ಪುಸ್ತಕಗಳು ಅಲ್ಲಿವೆ. ಅಲ್ಲಿನ ಪುಸ್ತಕಗಳಲ್ಲಿನ ವಿಚಾರಗಳು 'ನಿಮಗೆ ಯಾವುದು ಹಿತ' ಎಂಬುದನ್ನು ಸ್ಪಷ್ಟವಾಗಿ, ನೇರ ನುಡಿಗಳಲ್ಲಿ ತಿಳಿಸಿಕೊಡುತ್ತವೆ. ನಿಜ, ನಿಮ್ಮನ್ನು ಧೃತಿಗೆಡಿಸುವ ಅನೇಕ ಸಂಗತಿಗಳು ಸಮಾಜದಲ್ಲಿ ನಡೆಯುತ್ತಲೇ ಇರುತ್ತವೆ. ಅವು ನಿಮ್ಮ ಮನಸ್ಸನ್ನು ವಿಕ್ಷಿಪ್ತಗೊಳಿಸುತ್ತಿವೆ ಎಂಬುದೂ ನಿಜ. ಆದರೆ ಅದೇ ಸಂದರ್ಭದಲ್ಲಿ ಪ್ರಪಂಚದಲ್ಲಿ ಜ್ಞಾನರಾಶಿಯು ಹೇಗೆ ಭಾರೀಪ್ರಮಾಣದಲ್ಲಿ ವೃದ್ಧಿಯಾಗುತ್ತಿದೆ ಎಂಬುದನ್ನೂ ನೀವು ಗಮನಿಸಬೇಕು. ಮಾಹಿತಿಗಳ ಈ ಮಹಾಪೂರದಲ್ಲಿ ನಾವು ಯಾವುದನ್ನು ಸ್ವೀಕರಿಸಬೇಕು, ಯಾವುದನ್ನು ತಿರಸ್ಕರಿಸಬೇಕು ಎಂಬುದನ್ನು ಅರಿಯಲು ನಮ್ಮ ಮನಸ್ಸು ಸ್ವಸ್ಥವಾಗಿರಬೇಕು. ಜ್ಞಾನದ ಮೂಲಭೂತವಾದ ಅಂಶಗಳು ಯಾವುವು, ಬೆಳೆಯುತ್ತಿರುವ ಈ ಜ್ಞಾನರಾಶಿಯಲ್ಲಿ ನಾವು ಯಾವುದನ್ನು ಸ್ವೀಕರಿಸಬೇಕು ಎಂಬ ವಿವೇಕವನ್ನು ಆಶ್ರಮದ ಪುಸ್ತಕಗಳು ನಿಮಗೆ ನೀಡುತ್ತವೆ. ನೀವೆಲ್ಲ ಆಶ್ರಮದ ಪುಸ್ತಕ ಮಳಿಗೆಗೆ ಭೇಟಿಯಿತ್ತರೆ ಅಂತಹ ಪುಸ್ತಕಗಳನ್ನು ಖಂಡಿತ ಅಲ್ಲಿ ಕಾಣಬಹುದು.

ಈ ಶಿಬಿರದಲ್ಲಿ ವಿಶೇಷವಾಗಿ ನಿಮ್ಮ ಭವಿಷ್ಯ ಜೀವನದಲ್ಲಿ ಗಮನವಿಡಬೇಕಾದ ಮೂಲಭೂತವಾದ ಕೆಲವು ಅಂಶಗಳನ್ನು ಹಿರಿಯ ಸ್ವಾಮಿಗಳು, ಸಂಪನ್ಮೂಲ ವ್ಯಕ್ತಿಗಳು ನಿಮ್ಮ ಮುಂದಿಡಲಿದ್ದಾರೆ. ಅವರೆಲ್ಲರ ವಿಚಾರಗಳು ನಿಮ್ಮ ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ವಿಚಾರ ಪ್ರಚೋದಕ ವಿಷಯಗಳನ್ನು ಒದಗಿಸುತ್ತವೆ.

ನಿಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಒಂದೊಂದು ವೈಶಿಷ್ಟ್ಯವಿದೆ. ನಿಮ್ಮಲ್ಲಿ ಪ್ರತಿಯೊಬ್ಬರ ಪ್ರತಿಭೆ, ಹಿನ್ನೆಲೆ, ಆಸಕ್ತಿಗಳು ಮತ್ತು ವೈಚಾರಿಕ ದೃಷ್ಟಿಕೋನಗಳು ಬೇರೆಬೇರೆಯಾಗಿರುತ್ತವೆ. ಇವೆಲ್ಲವನ್ನೂ ಒಳಗೊಂಡು, ವೈಚಾರಿಕವಾಗಿ, ಆಧ್ಯಾತ್ಮಿಕವಾಗಿ ನೀವು ಸ್ವತಂತ್ರವಾಗಿ ವಿಚಾರ ಮಾಡುವಂತೆ ಕಲಿಯಲು ಪ್ರೇರೇಪಿಸುವುದೇ ಈ ಶಿಬಿರದ ಉದ್ದೇಶವಾಗಿದೆ.

ಈ ಶಿಬಿರದಲ್ಲಿ ಒಂದು ಪರಾಮರ್ಶೆಯ (Evaluation) ಅಧಿವೇಶನವೂ ಇದೆ. ಈ ಅಧಿವೇಶನವು ನಿಮ್ಮ ಕಾಲೇಜಿನಲ್ಲಿ ನಡೆಯುವಂಥ ಪರೀಕ್ಷೆಯೂ ಅಲ್ಲ ಅಥವಾ ಟೆಸ್ಟ್ ಕೂಡ ಅಲ್ಲ; ಕೇವಲ ನಿಮ್ಮನ್ನು ನೀವೇ ತಿಳಿದುಕೊಳ್ಳುವ, ನಿಮಗನ್ನಿಸಿದ್ದನ್ನು ವ್ಯಕ್ತಪಡಿಸುವ, ನಿಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ತಿಳಿಸುವ ಒಂದು ಅವಕಾಶ ಇದು. ಇದೊಂದು ಮುಖಾಮುಖಿಯಾದ ಆಪ್ತ ಸಂವಾದ. ನೀವು ಇಲ್ಲಿ ಯಾವುದೇ ರೀತಿಯ ಒತ್ತಡಕ್ಕೇ ಆಗಲಿ, ಸಂಕೋಚಕ್ಕೇ ಆಗಲಿ ಒಳಗಾಗದೆ, ಸಮಾಧಾನಚಿತ್ತರಾಗಿ ಇದನ್ನು ಅತ್ಯಂತ ಸುಲಭವೆಂದು ಪರಿಗಣಿಸಿ, ನಿಮ್ಮನ್ನು ನೀವು ಮುಕ್ತವಾಗಿ ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ನಿಮಗೆ ನೀಡಲಾಗುವ ಲಿಖಿತಪರೀಕ್ಷೆಯಲ್ಲಿ ನಿಮ್ಮ ಒಲವು-ನಿಲುವುಗಳನ್ನು, ಅಭಿಪ್ರಾಯಗಳನ್ನು ಯಾವುದೇ ಸಂಕೋಚವಿಲ್ಲದೆ ವ್ಯಕ್ತಪಡಿಸಬೇಕೆಂದು ತಿಳಿಯಪಡಿಸುತ್ತೇನೆ. ಈ ರೀತಿ ಸ್ವತಂತ್ರವಾಗಿ ನಿಮ್ಮನ್ನು ನೀವು ಅಭಿವ್ಯಕ್ತಗೊಳಿಸುವುದರಿಂದ ನಿಮ್ಮ ಆತ್ಮಸ್ಥೈರ್ಯ ಹೆಚ್ಚುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ನಾವು ನಿಮ್ಮ ಬಗ್ಗೆ ತಿಳಿದುಕೊಳ್ಳಬೇಕು;

ನಾವು ನಿಮ್ಮನ್ನು ತಲುಪಬೇಕು, ಆ ಮೂಲಕ ನಿಮ್ಮನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು ಎಂಬುದೇ ಈ ಮೌಲ್ಯಮಾಪನ ಪ್ರಯೋಗಗಳ ಆಶಯ.

ನಮ್ಮ ಯುವ ವಿದ್ಯಾರ್ಥಿಪೀಳಿಗೆಯ ಸರ್ವತೋಮುಖ ಬೆಳವಣಿಗೆಗೆ ಒಂದು ಶ್ರೇಷ್ಠ ಆದರ್ಶಮಾದರಿ ಅವಶ್ಯವಾಗಿ ಬೇಕಾಗಿದೆ. ಅಂತಹ ವ್ಯಕ್ತಿ ಸ್ವಾಮಿ ವಿವೇಕಾನಂದರು. ಅವರ ಸ್ಫೂರ್ತಿಯುತ ವಿಚಾರಧಾರೆಯನ್ನು ಯುವ ವಿದ್ಯಾರ್ಥಿಜನಾಂಗಕ್ಕೆ ತಿಳಿಸಿಕೊಡಬೇಕು. ಸ್ವಾಮೀಜಿಯ ಬಹುಮುಖ ಪ್ರತಿಭೆ ಹಾಗೂ ಶ್ರೇಷ್ಠ, ಶುದ್ಧ, ಪ್ರಾಮಾಣಿಕ ಹಾಗೂ ಸದಾ ಜನಾನುಕಂಪದಿಂದ ಮಿಡಿಯುತ್ತಿದ್ದ ಹೃದಯವುಳ್ಳ ಅವರ ವ್ಯಕ್ತಿತ್ವವನ್ನು ಪರಿಚಯಿಸಿದರೆ, ಅವರ ಜೀವನ ಉಪದೇಶಗಳಿಂದ ಪ್ರಭಾವಿತರಾದ ಯುವಕರಲ್ಲಿ ಆತ್ಮವಿಶ್ವಾಸದಿಂದ ಕೂಡಿದ ಒಂದು ಕ್ರಿಯಾಶೀಲ ಪರಿಪೂರ್ಣ ವ್ಯಕ್ತಿತ್ವ ವಿಕಾಸವಾಗಲು ಸಹಾಯಕವಾಗುತ್ತದೆ. ಈ ಒಂದು ಭರವಸೆಯೊಂದಿಗೆ ಈ ಯುವಚೇತನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಸ್ವತಃ ಸ್ವಾಮಿ ವಿವೇಕಾನಂದರೇ ಹೀಗೆ ಹೇಳುತ್ತಿದ್ದರು:

"ನಮಗಿಂದು ಬೇಕಾಗಿರುವುದು ಎಲ್ಲವನ್ನೂ ತ್ಯಾಗಮಾಡಿ, ದೇಶದ ಸಲುವಾಗಿ ತಮ್ಮ ಬಾಳನ್ನೇ ಮುಡುಪಾಗಿಡುವ ಯುವಕರು. ಮೊದಲು ನಾವು ಅವರ ಜೀವನವನ್ನು ರೂಪಿಸಬೇಕು, ಅನಂತರ ವಷ್ಟೇ ಅವರಿಂದ ಯಾವುದೇ ರಚನಾತ್ಮಕವಾದ ಕೆಲಸವನ್ನು ನಾವು ನಿರೀಕ್ಷಿಸಬಹುದು."

# ಶಿಬಿರಾರ್ಥಿಗಳ ಪ್ರತಿಕ್ರಿಯೆಗಳು

## ಚೈತನ್ಯದ ಚಿಲುಮೆಯಾಗಿ ಸ್ವಾಮಿ ವಿವೇಕಾನಂದರು ಮತ್ತು ದಿವ್ಯತ್ರಯರು

**ದರ್ಶನ್, ಎಂ.ವಿ.**
ಸರ್ಕಾರಿ ಪ್ರಥಮದರ್ಜೆ ಕಾಲೇಜು,
ಮಾಗಡಿ, ರಾಮನಗರ ಜಿಲ್ಲೆ

ಸ್ವಾಮಿ ವಿವೇಕಾನಂದರು ನಮ್ಮಲ್ಲಿ ಚೈತನ್ಯದ ಚಿಲುಮೆಯನ್ನು ಮೂಡಿಸಿದ್ದಾರೆ. ತಮ್ಮ ಶಕ್ತಿಯುತ ವ್ಯಕ್ತಿತ್ವದ ಮೂಲಕ, ಪ್ರಭಾವಪೂರ್ಣ ವಾಗ್ಮಿತ್ವದ ಮೂಲಕ ಹಾಗೂ ಪ್ರಚೋದಕ ಬರಹಗಳ ಮೂಲಕ ನಮ್ಮ ರಾಷ್ಟ್ರಚೇತನವನ್ನು ಜಾಗೃತಗೊಳಿಸಿ, ಯುವಕರಲ್ಲಿ ನವೋತ್ಸಾಹವನ್ನು ಕೆರಳಿಸಿ, ಅವರಲ್ಲಿ ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯನ್ನು ಕುದುರಿಸಿ, ಸ್ವತಂತ್ರ ನವಭಾರತ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿದ್ದಾರೆ. ಸ್ವಾಮೀಜಿಯವರ ಕೃತಿಗಳನ್ನು ಓದಿದಾಗ ಇಂದಿಗೂ ಅವರ ಶಕ್ತಿ–ಪ್ರಭಾವಗಳ ಸಂಚಾರ ನಮ್ಮ ನರ–ನಾಡಿಗಳಲ್ಲಿ ಉಂಟಾಗುತ್ತದೆ. ಅಪಾರ ಜ್ಞಾನಸಂಪತ್ತಿನಿಂದ ಕೂಡಿದ ಅವರ ಚಿಂತನೆಗಳು ಪ್ರಜ್ವಲಿಸುತ್ತಿರುವ ಭಾವಾಗ್ನಿಕುಂಡದಿಂದ ಸಿಡಿದುಬಂದ ಕಿಡಿಗಳಂತಿವೆ. ಅವು ನಮ್ಮಲ್ಲಿ ರಾಷ್ಟ್ರಭಕ್ತಿಯ ಕಿಚ್ಚನ್ನು ಹೊತ್ತಿಸುತ್ತವೆ. ಸ್ವಾಮಿ ವಿವೇಕಾನಂದರು ತಮ್ಮ ಭೌತಿಕ ದೇಹದಲ್ಲಿ ಕೇವಲ ೩೯ ವರ್ಷಗಳ ಕಾಲ ಇದ್ದರೂ ಇಂದಿಗೂ ಅವರು ಯುವಕರಿಗೆ ಮಾದರಿಯಾಗಿದ್ದಾರೆ. ಅವರ ಅಪಾರವಾದ ಜ್ಞಾನವನ್ನು ನಾವು ಸಹ ತಿಳಿದುಕೊಳ್ಳಬೇಕಾಗಿದೆ. ವಿಶಾಲ ದೃಷ್ಟಿಕೋನವನ್ನು ಇಟ್ಟುಕೊಂಡು ನಮ್ಮ ಎಲ್ಲ ಭಾವನೆಗಳನ್ನೂ ಸಮಾಜದ ಏಳಿಗೆಗಾಗಿ ಹರಿಯಬಿಡಲು ಅವರ ತತ್ತ್ವಗಳು ನಮ್ಮನ್ನು ಪ್ರೇರೇಪಿಸುತ್ತವೆ. ನಿಜವಾದ ದೇಶಪ್ರೇಮಿಗಿರಬೇಕಾದ ಎಲ್ಲ ಲಕ್ಷಣಗಳೂ ವಿವೇಕಾನಂದರಲ್ಲಿದ್ದವು. ತಾಯಿ ಹೇಗೆ ಮಗುವಿನ ಬಗ್ಗೆ ಚಿಂತಿಸುತ್ತಾಳೋ, ಹಾಗೆಯೇ ನಾವು ನಮ್ಮ ರಾಷ್ಟ್ರದ ಬಗ್ಗೆ ಚಿಂತಿಸಬೇಕು. ಇದಕ್ಕೆ ನಮ್ಮ ಆದರ್ಶವಾಗಿರುವವರು ಸ್ವಾಮಿ ವಿವೇಕಾನಂದರೊಬ್ಬರೇ.

**ರಂಜಿತ್ ಆರ್.**
ಕಾರ್ಕಳ.

ಯುವಕರನ್ನು ಕುರಿತು, "ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬ ಸಿಂಹಘರ್ಜನೆಯನ್ನು ಮಾಡಿದ ಭಾರತ ದೇಶದ ಏಕೈಕ ಅಧ್ಯಾತ್ಮ ಪುರುಷ ಸ್ವಾಮಿ ವಿವೇಕಾನಂದರು. ಮಲಗಿ ನಿದ್ರಿಸುತ್ತಿದ್ದ ಭಾರತೀಯ ಜನತೆಗೆ, ಅನ್ಯರಿಂದ ಆಗುತ್ತಿರುವ ಅನ್ಯಾಯವನ್ನು ಸದೆಬಡಿದು ಎದ್ದುನಿಲ್ಲಲು ಅವರು ಆಮೂಲಕ ಹುರಿದುಂಬಿಸಿದರು. ಭಾರತದ ಯುವಜನತೆಗೆ ವಿವೇಕಾನಂದರು ಹಲವಾರು ಆದರ್ಶಯುತವಾದ ಸಂದೇಶಗಳನ್ನು ನೀಡಿದ್ದಾರೆ. ನವಭಾರತದ ನಿರ್ಮಾಣ ಕೇವಲ ಯುವಕರಿಂದ ಮಾತ್ರ ಸಾಧ್ಯ ಎಂದರಿತ ವಿವೇಕಾನಂದರು ಯುವಜನತೆಯನ್ನು ಬಡಿದೆಬ್ಬಿಸಿದರು. ಯುವಜನತೆಯೇ ಈ ದೇಶದ ಆದರ್ಶಬಿಂದು; ಅವರು ಮನಸ್ಸು ಮಾಡಿದರೆ ಇಡೀ ಜಗತ್ತನ್ನೇ ಬದಲಾಯಿಸಬಹುದು ಎಂಬ ನಂಬಿಕೆಯನ್ನು ಇಟ್ಟವರು ವಿವೇಕಾನಂದರು. ಅವರ ಬಗ್ಗೆ ಕೇವಲ ಮಾತನಾಡಿದರೆ, ಭಾಷಣಗಳನ್ನು ಆಲಿಸಿದರೆ ಅದರಿಂದ ಏನೂ ಪ್ರಯೋಜನವಿಲ್ಲ. ಅದನ್ನು ಕಾರ್ಯರೂಪಕ್ಕೆ ತರಬೇಕು. ಆಗಮಾತ್ರ ವಿವೇಕಾನಂದರ ಕನಸನ್ನು ನನಸು ಮಾಡಲು ಸಾಧ್ಯ... ವಿವೇಕಾನಂದರ ಜೀವನ ಸಂದೇಶಗಳನ್ನು ಓದಿದಾಗ, ತಿಳಿದಾಗ ನನ್ನ ಮೈಯ ನರನಾಡಿಗಳು ಸ್ಫುಟಗೊಂಡವು. ಸ್ವಾಮೀಜಿಯವರು ಭಾರತವನ್ನು ಕಂಡದ್ದು ಮಾತೃಭೂಮಿಯಾಗಿ. ನಾವು ಯಾವ ದೇಶದಲ್ಲೇ ಇರಲಿ, ನಮಗೆ ನಮ್ಮ ಜನ್ಮಭೂಮಿಯು ಅತ್ಯಂತ ಪರಮಪಾವನ. ಹಲವಾರು ಕಟ್ಟುಪಾಡುಗಳ, ಭಾಷೆಗಳ, ಜನಾಂಗಗಳ ಮತ್ತು ಧರ್ಮಗಳ ತವರುಮನೆ ಭರತಖಂಡ. ಈ ಆದರ್ಶಯುತವಾದ ಭರತಖಂಡದ ಮಾಹಾತ್ಮೆಯನ್ನು ಜಗತ್ತಿಗೆಲ್ಲ ಸಾರಿದ ಏಕೈಕ ವ್ಯಕ್ತಿ ಸ್ವಾಮಿ ವಿವೇಕಾನಂದರು. ಧರ್ಮದ ಅನುಷ್ಠಾನ, ಸರ್ವರಿಗೂ ಶಿಕ್ಷಣ, ವೈದ್ಯಕೀಯ ಸೇವೆ – ಹೀಗೆ ಹಲವಾರು ಅಂಶಗಳನ್ನು ಕುರಿತು ಮೊಟ್ಟಮೊದಲು ಆಲೋಚಿಸಿದವರು ಸ್ವಾಮಿ ವಿವೇಕಾನಂದರು. "ಧರ್ಮದ ರಹಸ್ಯವಿರುವುದು ಸಿದ್ಧಾಂತಗಳಲ್ಲಲ್ಲ, ಅದರ ಅನುಷ್ಠಾನದಲ್ಲಿ. ಒಳ್ಳೆಯವರಾಗಿರುವುದು, ಒಳ್ಳೆಯದನ್ನು ಮಾಡುವುದು – ಇದೇ ಧರ್ಮದ ಸರ್ವಸ್ವ" ಎಂದವರು ವಿವೇಕಾನಂದರು. ಶ್ರೀರಾಮಕೃಷ್ಣರ ಆದರ್ಶ ಮೌಲ್ಯಗಳನ್ನು ಸಾರಲು ವಿವೇಕಾನಂದರು ಹುಟ್ಟುಹಾಕಿದ ಸಂಸ್ಥೆ ರಾಮಕೃಷ್ಣ ಮಿಷನ್. ಇದು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. **ತ್ಯಾಗ ಮತ್ತು ಸೇವೆ** ಇದರ ಪ್ರಮುಖ ಧ್ಯೇಯಗಳು. ಅಧ್ಯಾತ್ಮ ಶಿಕ್ಷಣವನ್ನು ಸರ್ವರಿಗೂ ಒದಗಿಸುವುದು, ಸ್ವಾಮೀಜಿಯವರ ಜೀವದಾಯಿನಿ ಮೌಲ್ಯಗಳನ್ನು ಶಿಕ್ಷಣದಲ್ಲಿ ಅಳವಡಿಸುವುದು – ಹೀಗೆ ಹಲವಾರು ಉದ್ದೇಶಗಳನ್ನು ಇದು ಹೊಂದಿದೆ. ರಾಮಕೃಷ್ಣ ಮಹಾಸಂಘದ ಶಾಖೆಗಳು ದೇಶವಿದೇಶಗಳಲ್ಲಿ ಸ್ಥಾಪಿತವಾಗಿದ್ದು, ದೇಶದ ಸರ್ವರ ಅಭಿವೃದ್ಧಿಗೆ ಪ್ರಯತ್ನಿಸುತ್ತಿವೆ. ಹಾಗೆಯೇ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ ಮತ್ತು ಶ್ರೀಶಾರದಾಮಾತೆಯವರ ಸಂದೇಶಗಳನ್ನು ವಿಶ್ವದೆಲ್ಲೆಡೆ ಪಸರಿಸುತ್ತಿವೆ.

ದಯಾನಂದ್
ಎನ್.ಬಿ., ನಾಗೇನಹಳ್ಳಿ,
ಕೊರಟಗೆರೆ ತಾಲ್ಲೂಕು,
ತುಮಕೂರು ಜಿಲ್ಲೆ

ರಾಮಕೃಷ್ಣ ಅಶ್ರಮದಲ್ಲಿ ಏರ್ಪಡಿಸಿದ್ದ 'ಅಖಿಲ ಕರ್ನಾಟಕ ವಿವೇಕ ಯುವಚೇತನ ಶಿಬಿರ' ದಲ್ಲಿ ವ್ಯಕ್ತಿತ್ವ ವಿಕಸನ, ಸೇವಾಕಾರ್ಯಗಳನ್ನು ಕುರಿತಂತೆ ವಿವೇಕಾನಂದರ ಸಂದೇಶವನ್ನು ಯುವಕರಿಗೆ ಬಿತ್ತರಿಸಲಾಯಿತು. "ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬ ಸಂದೇಶವನ್ನು ಸ್ವಾಮೀಜಿ ಹೇಗೆ ಜಗತ್ತಿಗೆ ಸಾರಿದರು ಎಂಬುದರ ಬಗೆಗೆ ಅನೇಕ ಗಣ್ಯವ್ಯಕ್ತಿಗಳು, ಸ್ವಾಮೀಜಿಗಳು ವಿದ್ಯಾರ್ಥಿಗಳಿಗೆ ಬಹಳ ಸರಳವಾಗಿ, ಅರ್ಥವಾಗುವ ರೀತಿಯಲ್ಲಿ ವಿವರಿಸಿದರು.

## ಶ್ರೀರಾಮಕೃಷ್ಣ ಪರಮಹಂಸರು

ಮೊದಲಬಾರಿಗೆ ಶ್ರೀರಾಮಕೃಷ್ಣ ಪರಮಹಂಸರ ಬಗೆಗೆ ನಾನು ಇಲ್ಲಿ ತಿಳಿದುಕೊಂಡೆನು. ಅವರ ಸಂದೇಶವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು: ಜಗತ್ತಿನ ಚರಾಚರ ವಸ್ತುಗಳಲ್ಲೆಲ್ಲಾ ದೇವರಿದ್ದಾನೆ. ದೇವರು ಸರ್ವವ್ಯಾಪಿ. ಮಾನವನು ಮಾಡುವ ನಿಸ್ವಾರ್ಥ ಸೇವೆ, ಆತನಲ್ಲಿರುವ ಜ್ಞಾನ ಇವುಗಳಿಂದಲೇ ದೇವರನ್ನು ಕಾಣಬಹುದು. ರಾಮಕೃಷ್ಣ ಪರಮಹಂಸರು ಆಧ್ಯಾತ್ಮಿಕತೆ ಮತ್ತು ಸೇವೆಯೆಡೆಗೆ ಹೆಚ್ಚಿನ ಒಲವನ್ನು ನೀಡಬೇಕೆಂದು ತಿಳಿಸಿದರು. ವಿವೇಕಾನಂದರು ಹೇಳುವಂತೆ, ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳ ತ್ರಿವೇಣಿಯ ಹಾಗೆ ಇವರ ಜೀವನವಿತ್ತು. ಹಾಗೆಯೇ ಇವರ ಜೀವನ ವೇದ ವೇದಾಂತಗಳಿಗೆ ಬರೆದಿರುವ ಸಚೇತನ ಭಾಷ್ಯವೂ ಆಗಿದೆ. ಜ್ಞಾನ, ಭಕ್ತಿ, ಯೋಗಗಳಿಂದ ದೇವರನ್ನು ಕಾಣಬಹುದು; ಹಲವು ರೂಪಗಳಲ್ಲಿ ದೇವರು ನಮಗೆ ಪ್ರತ್ಯಕ್ಷನಾಗುತ್ತಾನೆ ಎಂಬುದನ್ನು ಶ್ರೀರಾಮಕೃಷ್ಣರು ತೋರಿಸಿಕೊಟ್ಟರು. ಎಲ್ಲಾ ಧರ್ಮಗಳಲ್ಲೂ ತಾತ್ತ್ವಿಕ ಭಾಗವಿದೆ; ಅದನ್ನು ನಿದರ್ಶಿಸುವುದಕ್ಕೆ ಅನೇಕ ಪುರಾಣಗಳಿವೆ; ಅದನ್ನು ಅನುಷ್ಠಾನಕ್ಕೆ ತರಲು ಹಲವಾರು ಆಚರಣೆಗಳಿವೆ ಎಂದು ಅವರು ಹೇಳಿದರು. ಇದಿಷ್ಟೂ ಶ್ರೀರಾಮಕೃಷ್ಣ ಪರಮಹಂಸರ ಬಗೆಗೆ ನಾನು ತಿಳಿದುಕೊಂಡಂಥ ಕೆಲವು ವಿಚಾರಗಳಾಗಿವೆ.

## ಶ್ರೀಶಾರದಾ ಮಾತೆಯವರು

ಶ್ರೀಶಾರದಾಮಾತೆಯವರು ಶ್ರೀರಾಮಕೃಷ್ಣರ ದಿವ್ಯಸಂಗಾತಿ. ಇವರು ಸ್ತ್ರೀಯರ ಉದ್ಧಾರಕ್ಕಾಗಿ ಶ್ರಮಿಸಿದರು; ದುಃಖ ದಾರಿದ್ರ್ಯದಲ್ಲಿ ನೊಂದವರಿಗೆ ದಾರಿಬೆಳಕಾದರು. ವಿಧವಾಶಿಲುಬೆಗೆ ಏರಿದವರಿಗೆ ಸಮಾಧಾನಪಡಿಸುವ ಕೆಲಸ ಮಾಡುತ್ತಿದ್ದರು. ಪಾಪಕೂಪದಲ್ಲಿ ಬಿದ್ದಿದ್ದವರನ್ನು ಮೇಲೆತ್ತಿ, ಅವರನ್ನೆಲ್ಲ ಭಗವಂತನ ಮಕ್ಕಳನ್ನಾಗಿ ಮಾಡಿದರು. ಅವರ ಮಹತ್ವವನ್ನು ಅರಿಯುವುದು ಬಹಳ ಕಷ್ಟ. ಇಷ್ಟು ಶ್ರೀಶಾರದಾಮಾತೆಯವರ ಬಗೆಗಿನ ವಿಚಾರಗಳು.

## ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು ಧೀಮಂತ ಧಾರ್ಮಿಕ ವಿಚಾರವಾದಿಯಾಗಿದ್ದರು. ಅವರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಆದರೆ ನನಗೆ ತಿಳಿದ ಕೆಲವು ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ೧೮೯೩ರಲ್ಲಿ ನಡೆದ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಅವರು ಭಾಗವಹಿಸಿದ್ದರು. ಈ ಸಮ್ಮೇಳನದ ಉದ್ದೇಶ ಮತೀಯ ದ್ವೇಷಗಳನ್ನು ಕಡಿಮೆ ಮಾಡಬೇಕೆಂಬುದಾಗಿತ್ತು. ಈ ಸಮ್ಮೇಳನದಲ್ಲಿ ಇವರಿಗೆ ಮಾತನಾಡಲು ಅವಕಾಶ ಸಿಕ್ಕಿತು. ಆಗ ಅವರು ವಿನಯವಾಗಿ ಅಮೇರಿಕಾದ ಜನತೆಯನ್ನು ಕುರಿತು, "ಸಹೋದರಿಯರೇ, ಸಹೋದರರೇ" ಎಂದು ಸಂಬೋಧಿಸಿದರು. ಅದಕ್ಕೆ ಎಲ್ಲರೂ ಚಪ್ಪಾಳೆ ತಟ್ಟಿದರು. ಅವರು ಹಿಂದೂಧರ್ಮದ ಪರವಾಗಿ ಅಲ್ಲಿ ಭಾಷಣ ಮಾಡಿದರು. ಆ ಭಾಷಣದ ಶೈಲಿ ಮತ್ತು ವೈಖರಿ ಎಲ್ಲರನ್ನೂ ಆಕರ್ಷಿಸಿತು. ಅಮೇರಿಕದಲ್ಲಿ ವಿವೇಕಾನಂದರು ಸನಾತನ ಹಿಂದೂ ಧರ್ಮದ ತತ್ತ್ವಗಳನ್ನು ಬೋಧಿಸಿದರು. "ಏಳಿ, ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬ ಸಂದೇಶವನ್ನು ಅವರು ಯುವಕರಿಗೆ ಸಾರಿದರು. ದೇವರನ್ನು ಕೇವಲ ವಿಗ್ರಹ ರೂಪದಲ್ಲಿ ಕಾಣುವುದಲ್ಲ, ಅವನು ಎಲ್ಲರ ಹೃದಯದಲ್ಲೂ ನೆಲೆಸಿರುವನು ಎಂದು ಅವರು ಹೇಳಿದರು. ನಿಸ್ವಾರ್ಥತೆಗೆ ಹೆಚ್ಚಿನ ಆದ್ಯತೆ ನೀಡಿದ ವಿವೇಕಾನಂದರು, ಅಂಥ ಸೇವೆಯಿಂದ ದೇವರನ್ನು ಕಾಣಬಹುದು; ಸ್ವಾರ್ಥದಿಂದ ಮಾಡಿದ ಸೇವೆಯು ನಮಗೆ ಮುಕ್ತಿಯನ್ನು ಕೊಡುವುದಿಲ್ಲ ಎಂದು ಸಾರಿದರು. ದೀನನಲ್ಲಿ, ದರಿದ್ರನಲ್ಲಿ, ಪಾಪಿಯಲ್ಲಿ ಕೂಡ ದೇವರು ನೆಲೆಸಿರುತ್ತಾನೆ ಎಂಬುದನ್ನು ವಿವೇಕಾನಂದರು ತೋರಿಸಿದರು. ಇವರು ತಮ್ಮ ಆಧ್ಯಾತ್ಮಿಕ ಚಿಂತನೆಗಳ ಮೂಲಕ ಜನರಲ್ಲಿ ಭಕ್ತಿಭಾವ ಮೂಡುವಂತೆ ಮಾಡಿದರು. ವಿವೇಕಾನಂದರು ಅನೇಕ ದೇಶಗಳನ್ನು ಸಂಚರಿಸಿದರು. ಪರಮಾತ್ಮನ ಸಾಕ್ಷಾತ್ಕಾರವಾಗಬೇಕಾದರೆ ಜ್ಞಾನಯೋಗ, ಭಕ್ತಿಯೋಗ, ಕರ್ಮಯೋಗ ಮತ್ತು ಧ್ಯಾನಯೋಗಗಳು ಪೂರಕವಾಗಿವೆ ಎಂದು ಸಾರಿದರು. ನಂತರ ಇವರು ರಾಮಕೃಷ್ಣ ಪರಮಹಂಸರ ಹೆಸರಿನಲ್ಲಿ ೧೮೯೭ ರ ಮೇ ೧ ರಂದು ತಮ್ಮ ಸೋದರ ಸಂನ್ಯಾಸಿಗಳನ್ನು ಮತ್ತು ಗೃಹಸ್ಥ ಭಕ್ತರನ್ನು ಒಗ್ಗೂಡಿಸಿಕೊಂಡು, ರಾಮಕೃಷ್ಣ ಮಿಷನ್ ಅನ್ನು ಸ್ಥಾಪಿಸಿದರು. ಇದರ ಮೂಲಕ ಹಲವಾರು ವಿದ್ಯಾಸಂಸ್ಥೆಗಳನ್ನೂ, ಸೇವಾಸಂಸ್ಥೆಗಳನ್ನೂ ಮತ್ತು ಆಸ್ಪತ್ರೆಗಳನ್ನೂ ನಡೆಸಲಾಗುತ್ತಿದೆ. ಈಗ ಇದು ದೊಡ್ಡ ಸಂಸ್ಥೆಯಾಗಿ ಬೆಳೆದಿದೆ. ಒಟ್ಟಿನಲ್ಲಿ ವಿವೇಕಾನಂದರು ತಮ್ಮ ಸಿಂಹಧ್ವನಿಯಲ್ಲಿ ಯುವಕರಿಗೆ ಅನೇಕ ಸಂದೇಶಗಳನ್ನು ನೀಡಿದ್ದಾರೆ. ಆಮೂಲಕ ಅವರಿಗೆ ಸಾಧನೆಯ ಪಥವನ್ನು ಬೋಧಿಸಿದ್ದಾರೆ. ಇಷ್ಟು ವಿವೇಕಾನಂದರ ಬಗೆಗೆ ನನಗೆ ತಿಳಿದಂತಹ ವಿಚಾರಗಳಾಗಿವೆ.

## ರಾಮಕೃಷ್ಣ ಆಶ್ರಮದ ಬಗ್ಗೆ ನನ್ನ ಅನಿಸಿಕೆಗಳು

ನನಗನ್ನಿಸಿದ ಹಾಗೆ ರಾಮಕೃಷ್ಣ ಆಶ್ರಮವು ನಿಜವಾಗಿಯೂ ಒಂದು ಸ್ವರ್ಗದಂತೆ ಗೋಚರವಾಗುತ್ತಿತ್ತು. ಅಲ್ಲಿನ ಹೂದೋಟದಲ್ಲಿ ಅರಳಿದ ಹೂವುಗಳು, ಶುಭ್ರತೆಯಿಂದ ಕೂಡಿದ ಜಾಗ ಮತ್ತು ಅಲ್ಲಿನ ನಿಶ್ಶಬ್ದತೆ ನನಗೆ ತುಂಬಾ ಆನಂದವನ್ನು ಉಂಟುಮಾಡಿದವು. ಅಲ್ಲಿನ ದೇಗುಲವಂತೂ, ನಮ್ಮ ಮನಸ್ಸಿನಲ್ಲೇ ಒಂದು ದೇವರ ಗುಡಿಯನ್ನು ಸ್ಥಾಪಿಸಿ ಅಲ್ಲಿ ಆತ್ಮಲಿಂಗವನ್ನು ಇರಿಸಿ ಪೂಜಿಸುತ್ತಿದ್ದೇವೇನೋ ಎನ್ನುವಷ್ಟು ಭಕ್ತಿಭಾವವನ್ನು ನಮ್ಮಲ್ಲಿ ಉದ್ಭವಿಸುತ್ತದೆ. ರಾಮಕೃಷ್ಣ ಆಶ್ರಮದ ಪ್ರತಿಯೊಬ್ಬ ಸೋದರ ಸಂನ್ಯಾಸಿ ಸಹ ಒಂದು ಅದ್ಭುತವಾದ ಶಕ್ತಿಯನ್ನು ಹೊಂದಿದವರಂತೆ ಕಾಣುತ್ತಿದ್ದರು. ಒಟ್ಟಿನಲ್ಲಿ ಹೇಳಬೇಕಾದರೆ ರಾಮಕೃಷ್ಣ ಆಶ್ರಮ ಅದ್ಭುತವಾದ, ಅಗಾಧ ಶಕ್ತಿಯನ್ನು ಹೊಂದಿದ, ಭಕ್ತಿ, ಭಾವ, ಪರಿಶ್ರಮಕ್ಕೆ ಹೆಸರಾದ ಒಂದು ಸ್ವರ್ಗದಂತಿದೆ. ಇಷ್ಟು ರಾಮಕೃಷ್ಣ ಆಶ್ರಮದ ಬಗ್ಗೆ ನನ್ನ ಅನಿಸಿಕೆಗಳಾಗಿವೆ.

# ನನ್ನಲ್ಲಿ ಉಂಟಾದ ಬದಲಾವಣೆಗಳು ಮತ್ತು ನನ್ನ ಸಂಕಲ್ಪಗಳು

೧. ನನ್ನಲ್ಲಿ ಶಿಸ್ತು, ಸಮಾನತೆ, ಶಾಂತಿ, ಸಹನೆ, ಸಾಮಾಜಿಕ ಕಳಕಳಿ, ನಿಸ್ವಾರ್ಥ ಸೇವೆ ಮತ್ತು ಸಹಬಾಳ್ವೆಯ ಭಾವನೆ ಉಂಟಾಗಿದೆ.

೨. ಅಪಾರ ಜ್ಞಾನದ ಸಂಪಾದನೆಯಾಗಿದೆ.

೩. ಸ್ವಾಮಿ ವಿವೇಕಾನಂದರ ಹಾಗೂ ಶ್ರೀರಾಮಕೃಷ್ಣರ ಸಂದೇಶಗಳು ನನ್ನ ಮೇಲೆ ಆಳವಾದ ಪ್ರಭಾವವನ್ನು ಬೀರಿವೆ.

೪. ನಮ್ಮ ಧರ್ಮ, ಸಂಸ್ಕೃತಿ ಹಾಗೂ ಆಧ್ಯಾತ್ಮಿಕತೆಯ ಉಳಿವಿಗೆ ನನ್ನಲ್ಲಿ ಕಾಳಜಿ ಉಂಟಾಗಿದೆ.

೫. ನನ್ನ ಸ್ನೇಹಿತರಲ್ಲಿ ನಾನು ಈ ನನ್ನ ಅನುಭವವನ್ನು ಹಂಚಿಕೊಳ್ಳುತ್ತೇನೆ.

೬. ದೇಶಭಕ್ತಿ, ದೇಶಪ್ರೇಮದ ಬಗ್ಗೆ ನನ್ನಲ್ಲಿ ಮತ್ತಷ್ಟು ಆಸಕ್ತಿ ಉಂಟಾಗಿದೆ.

೭. ಬಡವರಿಗೆ, ದೀನರಿಗೆ ನನ್ನ ಕೈಲಾದಷ್ಟು ಸಹಾಯ ಮಾಡುತ್ತೇನೆ.

೮. ನಮ್ಮ ಯುವಕರನ್ನು ಸರಿದಾರಿಯಲ್ಲಿ ನಡೆಸುತ್ತೇನೆ.

– ದರ್ಶನ್ ಎಂ.ವಿ. ಸರ್ಕಾರಿ ಪ್ರಥಮದರ್ಜೆ ಕಾಲೇಜು, ಮಾಗಡಿ, ರಾಮನಗರ ಜಿಲ್ಲೆ

ಯುವಕರು ದೇಶದ ಆಧಾರಸ್ತಂಭಗಳಿದ್ದಂತೆ. ರಾಮಕೃಷ್ಣ ಆಶ್ರಮ ನನಗೆ ಪ್ರಮುಖವಾಗಿ ಎರಡು ಅಂಶಗಳನ್ನು ಮೈಗೂಡಿಸಿಕೊಳ್ಳುವಂತೆ ಮಾಡಿದೆ : ೧. **ಶಿಸ್ತು** ಮತ್ತು ೨. **ಸಮಯ ಪರಿಪಾಲನೆ.** ಕಣ್ಣಿಗೆ ಕಾಣದ ದೇವರಿಗೆ ಬೆಲೆ ಕೊಡುವುದಕ್ಕಿಂತ ಕಣ್ಣಿಗೆ ಕಾಣುವ ದೇವರಿಗೆ ಬೆಲೆ ಕೊಟ್ಟರೆ ಎಷ್ಟೋ ಲೇಸು. ಕಣ್ಣಿಗೆ ಕಾಣುವವರು ತಂದೆ–ತಾಯಿ, ಗುರುಗಳು, ಯತಿವರ್ಯರುಗಳು. ಇವರೇ ನಿಜವಾದ ದೇವರು. ಇವರನ್ನು ನಾವು ನಿಜವಾಗಲೂ ಪೂಜಿಸಬೇಕು. ನಾವು ಖಾಲಿ ಹಾಳೆ ಇದ್ದಂತೆ. ಯಾರೂ ಹುಟ್ಟುತ್ತಲೇ ಎಲ್ಲ ವಿಷಯವನ್ನೂ ತಿಳಿದುಕೊಂಡು ಬಂದಿರುವುದಿಲ್ಲ. ಹಂತಹಂತವಾಗಿ ಮೇಲೆ ಏರಿದರೆ ಪ್ರತಿಹಂತದಲ್ಲೂ ನೋವು–ನಲಿವು ಅನುಭವಿಸಿ ಉನ್ನತ ಸ್ಥಾನವನ್ನು ತಲುಪುತ್ತೇವೆ. ಆದರೆ ಒಂದೇ ಸಲ ಮೇಲೆ ಹೋದರೆ, ಒಂದಲ್ಲ ಒಂದು ದಿನ ಕೆಳಕ್ಕೆ ಬೀಳುತ್ತೇವೆ. ಸ್ವಾಮೀಜಿಗಳು ಯುವಕರಿಗೆ ಅಡಿಪಾಯವಿದ್ದಂತೆ. ಅವರು ಬೇರು, ನಾವು ರೆಂಬೆಕೊಂಬೆಗಳು. ಬೆಳೆಯಲಿಕ್ಕೆ ಅವರು ಸಹಾಯ ಮಾಡುತ್ತಾರೆ, ನಮ್ಮ ಭಾರ ಹೊತ್ತುಕೊಂಡು ಸಾಧನೆ ಕಡೆಗೆ ಹೊತ್ತೊಯ್ಯುತ್ತಾರೆ. ದೊಡ್ಡ ಸಾಧನೆಯ ಕನಸನ್ನು ಕಾಣಬೇಕು. ಅಷ್ಟಾಗದಿದ್ದರೂ, ಅದರಲ್ಲಿ ಒಂದು ಭಾಗವಾದರೂ ನೆರವೇರುತ್ತದೆ. ಚಿಕ್ಕ ಕನಸನ್ನು ಕಾಣಬಾರದು.

– ನವೀನ್ ಜಿ.ಕೆ., ಚನ್ನರಾಯಪಟ್ಟಣ, ಹಾಸನ ಜಿಲ್ಲೆ

ಆಶ್ರಮದ ವಾತಾವರಣ, ಅಲ್ಲಿನ ವಸತಿ ಎಲ್ಲವೂ ಚೆನ್ನಾಗಿತ್ತು. ಆಶ್ರಮದಿಂದ ನಾನು ಸಹನೆ, ತಾಳ್ಮೆ, ನಿಸ್ವಾರ್ಥತೆಗಳನ್ನು ಕಲಿತುಕೊಂಡೆನು. ಅಲ್ಲಿ ತಿಳಿಸಿಕೊಟ್ಟ ನಮ್ಮ ಧರ್ಮ, ಆಧ್ಯಾತ್ಮಿಕತೆ ಬಗೆಗಿನ ವಿಚಾರಗಳಿಂದ ನನಗೆ ತುಂಬಾ ಸಂತೋಷವಾಗಿದೆ. ಅಲ್ಲಿನ ಆಹಾರದ ವ್ಯವಸ್ಥೆಯಲ್ಲಿ ಕಂಡುಬಂದ ಪ್ರೀತಿ, ಸಹನೆ, ತಾಳ್ಮೆ ಎಲ್ಲವೂ ನಮ್ಮಂತಹ ಯುವಕರಿಗೆ ಮಾದರಿಯಾಗಿವೆ. ಈಗ ಪಾಶ್ಚಾತ್ಯ ಸಂಸ್ಕೃತಿಯ ಪಿಡುಗು ಹೆಚ್ಚಾಗಿ ಇದ್ದರೂ, ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಆಗಮಿಸಿದ್ದರು. ಭವ್ಯಭಾರತ ನಿರ್ಮಾಣವಾಗಬೇಕಾದರೆ, ಯುವಕರ ಆವಶ್ಯಕತೆಯ ಅರಿವು ನನಗೆ ಅಲ್ಲಿ ಉಂಟಾಯಿತು. ಈ ಶಿಬಿರದಿಂದ ನನಗೆ ಒಂದು ದೃಢವಾದ ನಿಶ್ಚಯ ಉದಯಿಸಿದೆ. ಅದೆಂದರೆ, "ನಾನು ಹುಟ್ಟಿರುವುದು ದೇಶಕ್ಕಾಗಿ, ನನ್ನ ದೇಶದ ಅಭಿವೃದ್ಧಿಗಾಗಿ. ದೇಶದ ರಕ್ಷಣೆಗಾಗಿ ನಾನು ಸದಾ ಸಿದ್ಧನಾಗಿರುತ್ತೇನೆ."

– ಶರಣಬಸವ ವಿ.ವಾಲಿ, ಧಾರವಾಡ

ಹಿಂದೆಂದೂ ಕಂಡಿರದ ವಿಶಿಷ್ಟ ಪವಿತ್ರ ಅನುಭವವಿದು. ಶಾಂತಿ, ಸಂಯಮ, ಸೇವೆ ಹಾಗೂ ಅಧ್ಯಾತ್ಮದ ತಳಹದಿಯ ಮೇಲೆ ನಿಂತಿರುವ ದೇವಲೋಕವೇ ಮೈಸೂರಿನ ರಾಮಕೃಷ್ಣ ಆಶ್ರಮ. ಇಲ್ಲಿನ ಸ್ವಾಮೀಜಿಗಳ ಸಮಯಪ್ರಜ್ಞೆ, ಶಾಂತತೆ, ಸಮಾನತೆ, ಸರಳತೆ, ಉನ್ನತ ವಿಚಾರ, ಸೇವಾ ಮನೋಭಾವ, ಸುವ್ಯವಸ್ಥೆ, ನಿರರ್ಗಳವಾಗಿ ಇಂಗ್ಲಿಷ್ ಮಾತನಾಡುವಿಕೆ ಹಾಗೂ ಶ್ರೇಷ್ಠ ಆಧ್ಯಾತ್ಮಿಕತೆಗಳು ನನ್ನನ್ನು ಮೂಕವಿಸ್ಮಿತಗೊಳಿಸಿದವು.

ಸುಶೀಲಕುಮಾರ ಮ ಕುಂಬಾರ, ಬಿಜಾಪುರ.

ಭಾರತಮಾತೆಯ ಮಾನಸಪುತ್ರ ಸ್ವಾಮಿ ವಿವೇಕಾನಂದರ ಸಿಡಿಲಿನ ನುಡಿಗಳ ಆಧಾರದ ಮೇಲೆ, ಸಮಾಜದ ಉದ್ಧಾರ, ಸುಧಾರಣೆ, ಉನ್ನತಿ ಹಾಗೂ ಬದಲಾವಣೆಯಲ್ಲಿ ರಾಮಕೃಷ್ಣ ಆಶ್ರಮ ಮಾಡುತ್ತಿರುವ ಕಾರ್ಯವು ಭಾರತದಲ್ಲಿ ಅಷ್ಟೇ ಅಲ್ಲ, ಇಡೀ ವಿಶ್ವದಲ್ಲಿಯೇ ಸೋಲಿಲ್ಲದ ಸಾವಿಲ್ಲದ ವೀರಹೆಜ್ಜೆ.

ಶ್ರೀರಾಮಕೃಷ್ಣರ ಪರಮಶಿಷ್ಯರಾದ ಸ್ವಾಮಿ ವಿವೇಕಾನಂದರು ಇಡೀ ವಿಶ್ವಕ್ಕೆ ಸ್ಫೂರ್ತಿ. ಶಿಬಿರದಲ್ಲಿ ನಾನು ಅನುಭವಿಸಿದ ನನ್ನ ಹಾಗೂ ಆಶ್ರಮದ ಸ್ವಾಮೀಜಿಗಳ ಅನ್ಯೋನ್ಯ ಸಂಬಂಧವು ನನ್ನ ಜೀವನದ ಅವಿಸ್ಮರಣೀಯ ಘಟನೆಯಾಗಿದೆ. ತಾವು ಆಯೋಜಿಸಿದ ಮೂರು ದಿನಗಳ ಶಿಬಿರದಲ್ಲಿ ನೀಡಿದ ಪುಸ್ತಕಗಳು, ಆಯೋಜಿಸಿದ ಉಪನ್ಯಾಸಗಳು ಹಾಗೂ ಪ್ರಶ್ನೋತ್ತರಗಳೇನು ಸಾಮಾನ್ಯ ವಿಷಯಗಳೇ? ನಿಜಕ್ಕೂ ಅವು ಈ ಲೋಕದ್ದಲ್ಲ ಎಂದು ನನಗನಿಸಿತು...

ಈ ಮೂರು ದಿನದ ಅನುಸಂಧಾನ ಶಿಬಿರದಲ್ಲಿ ಅತ್ಯದ್ಭುತ ವಿಷಯಗಳನ್ನು ತಿಳಿದಿದ್ದೇನೆ. ನುಡಿದಂತೆ ನಡೆಯುವ, ನಡೆದಂತೆ ನುಡಿಯುವ ನಿಮ್ಮ ತತ್ತ್ವವನ್ನು ನನ್ನ ಜೀವನದಲ್ಲಿ ಅಳವಡಿಸಿಕೊಂಡು, ಇಡೀ ನಮ್ಮ ಭಾರತದಲ್ಲಿ ಅಷ್ಟೇ ಅಲ್ಲ, ಇಡೀ ವಿಶ್ವಕ್ಕೆ ಪಸರಿಸುವುದು ನನ್ನ ದೃಢನಿರ್ಧಾರವಾಗಿದೆ. ಅದಕ್ಕಾಗಿ ನಾನು ನಿಮ್ಮೊಂದಿಗೆ ಸದಾ ಸಿದ್ಧ. ❀

ತಮ್ಮ ಶಿಬಿರದ ಕೊನೆಯ ದಿನದ ಕಾರ್ಯಕ್ರಮದಲ್ಲಿ ಒಬ್ಬ ಸ್ವಾಮೀಜಿಯವರು ಒಂದು ಮಾತು ಹೇಳಿದರು, "ನಾವು ನಿಮಗೆ ಎಲ್ಲಾ ರೀತಿಯ ಸೌಲಭ್ಯ ನೀಡಿದ್ದೇವೆ. ನೀವು ನಮಗೆ ಏನು ನೀಡುತ್ತೀರಿ?" ಈ ಮಾತು ನೆನೆದರೆ ಈಗಲೂ ನನ್ನ ರೋಮಗಳು ನಿಮಿರುತ್ತವೆ. ಇದನ್ನು ನಾನು ಜೀವನದಲ್ಲಿ ಅಳವಡಿಸಿಕೊಂಡು ಸ್ವಾಮೀಜಿಯ ಮಾತಿಗೆ ಉತ್ತಮವಾದ 'ಫಲಿತಾಂಶ'ದ ಉತ್ತರ ನೀಡುತ್ತೇನೆ. ನಮ್ಮ ದೇಶದಲ್ಲಿ ಪ್ರಸ್ತುತ ನಡೆಯುತ್ತಿರುವ ಭ್ರಷ್ಟಾಚಾರ

ವನ್ನು ತೊಲಗಿಸಲು ಇಂತಹ ಅನೇಕ ಕಾರ್ಯಕ್ರಮಗಳು ಯುವಜನತೆಗೆ ಬೇಕೇಬೇಕು. ಈ ನಿಟ್ಟಿನಲ್ಲಿ ತಾವು ಭವಿಷ್ಯದಲ್ಲಿ ಒಂದು ಸೂಕ್ತ ಕಾರ್ಯಕ್ರಮವನ್ನು ನಡೆಸುವುದಾಗಿ ನಾನು ಭಾವಿಸಿದ್ದೇನೆ. ಯುವಜನತೆ ಸ್ವಾಮಿ ವಿವೇಕಾನಂದರ ಜೀವನವನ್ನು ಓದಿ ಅವರ ದಾರಿಯನ್ನು ಅನುಸರಿಸಬೇಕಾಗಿದೆ. ಅದಕ್ಕೆ ಅವರ ತತ್ತ್ವ ಮತ್ತು ನೀತಿಮಾತುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅದನ್ನು ನಾನು ನಿಧಾನವಾದರೂ ಮಾಡುತ್ತೇನೆ. ನಮ್ಮ ದೇಶದ ಪ್ರಾಚೀನ ಹಿಂದೂಧರ್ಮದ ಅವನತಿ ಆಗುತ್ತಿರುವುದರಿಂದ ನಾವು ನಮ್ಮ ವೇದ, ಪುರಾಣ, ಕಾವ್ಯಗಳ ಅಧ್ಯಯನವನ್ನು ಅಗತ್ಯವಾಗಿ ಮಾಡಬೇಕು. ಅದಕ್ಕಾಗಿ ಸಂಸ್ಕೃತ ಶ್ಲೋಕಗಳನ್ನು ನಾನು ಅಧ್ಯಯನ ಮಾಡುವೆ ಮತ್ತು ದೇಶದ ಸಂಸ್ಕೃತಿಯ ಉಳಿವಿಗಾಗಿ ಈ ಜೀವನವನ್ನು ಸವೆಸುವೆ. – ಪ್ರಶಾಂತ ಎಂ.ಮಾಲಿ ಬಿರಾದಾರ, ಗುಲಬರ್ಗಾ

ರಮೇಶ್ ಸರೋದಿ,
ತಾಳಿಕೋಟೆ

ಸಹಸ್ರಾರು ಜನ್ಮ ನಾನು ವ್ಯರ್ಥ ಮಾಡಿದ್ದೇನೆ. ಆದರೆ ಈ ಒಂದು ಜನ್ಮವನ್ನಾದರೂ ಸ್ವಾಮಿ ವಿವೇಕಾನಂದರ ಜೀವನ ತತ್ತ್ವಗಳನ್ನು ಹಾಗೂ ಅವರ ಆದರ್ಶ ವಿಚಾರಗಳನ್ನು ತಿಳಿದುಕೊಳ್ಳಲು ಮೀಸಲಿಡುತ್ತೇನೆ. "If you like Vivekanada, then he loves you" ಎಂಬ ಮಾತು ನನ್ನ ಮನಸ್ಸಿನ ಭಾವನೆಯ ಬಾಗಿಲನ್ನು ತಟ್ಟಿದೆ. "My dear youth, do not go empty handed, you must take motivation and inspiration" ಎಂಬ ಆಶ್ರಮದ ಸ್ವಾಮೀಜಿಯವರ ಸಿಡಿಲಿನ ಮಾತುಗಳು ಈಗಲೂ ನನ್ನಲ್ಲಿ ಅನುರಣಿಸುತ್ತಿವೆ. ಇಂದಿನ ಆಧುನಿಕ ಜೀವನದ 'ಜಾಗತೀಕರಣ'ದ ತೀವ್ರ ಭರಾಟೆಯಲ್ಲಿ ಹೆಚ್ಚಿನ ಯುವಕ–ಯುವತಿಯರು ಕಪಿಗಳಂತೆ ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಸರಿಸುತ್ತಿದ್ದಾರೆ. ಇಂತಹ ಯುವಪೀಳಿಗೆಗೆ ಈ 'ಯುವಚೇತನ ಶಿಬಿರ'ವು ಉದಾತ್ತವಾದ ಮೌಲ್ಯಗಳನ್ನು ಅರಿವು ಮಾಡಿಸಿ, ಯುವಪೀಳಿಗೆಯನ್ನು 'ಕತ್ತಲಿನಿಂದ ಬೆಳಕಿನಡೆಗೆ' ಕೊಂಡೊಯ್ಯುವ ಕಾರ್ಯ ಮಾಡಿದೆ. ಪರಿಣಾಮವಾಗಿ, ಏಕಾಗ್ರತೆ, ಉತ್ಸಾಹ, ಸ್ಫೂರ್ತಿ, ಆತ್ಮವಿಶ್ವಾಸ, ಇಚ್ಛಾಶಕ್ತಿ, ಶಿಸ್ತು, ಸಂಯಮ, ನಿಸ್ವಾರ್ಥತೆ – ಹೀಗೆ ಎಲ್ಲಾ ನೈಜಮೌಲ್ಯಗಳು ಈ ಶಿಬಿರದಿಂದ ನನ್ನಲ್ಲಿ ಕರಗತವಾಗಿವೆ.

ಮಹೇಶ ರಾಮಕೃಷ್ಣ
ಹೆಗಡೆ, ಕೀರ್ತಿಗದ್ದೆ,
ಇಟಗಿ.

ನಿಮ್ಮೆಲ್ಲರ ಅವಿನಾಭಾವದ ಸಂಬಂಧ, ಆತ್ಮೀಯತೆ ನನ್ನ ಜೀವನಪರ್ಯಂತ ಬಿಡಲಾರದು. ಇದು ಹೊಗಳಿಕೆ ಮಾತಲ್ಲ, ವಾಸ್ತವದ ಭಾವನೆ. ಪ್ರತಿದಿನವೂ ನನ್ನ ಮನೆಯಲ್ಲಿ ಅಲ್ಲಿಯ ವಿಚಾರಗಳನ್ನು ವಿಮರ್ಶಿಸುತ್ತಲೇ ಇರುತ್ತೇನೆ. ಪದವಿ ಮುಗಿದು ಜವಾಬ್ದಾರಿ ನಾಗರಿಕನಾಗುವ ಹಂತದಲ್ಲಿದ್ದರೂ ಒಂದು ನಿರ್ದಿಷ್ಟ ಗುರಿ ಇಲ್ಲದೆ ಮಂಗಾಟದ ಮನಸ್ಸಿನಿಂದ ತೊಳಲಾಡುತ್ತಿದ್ದ ನನಗೆ ಶ್ರೀರಾಮಕೃಷ್ಣ ಮತ್ತು ವಿವೇಕಾನಂದರ ಆದರ್ಶ ಮತ್ತು ವೈಚಾರಿಕತೆಯು ಪರಿಚಯವನ್ನು ಈ ಶಿಬಿರ ಮತ್ತು ಆಶ್ರಮ ನನಗೆ ನೀಡಿತು. ಗುರಿಯ ಬಾಗಿಲನ್ನು ತೆರೆಯಲು ಬೀಗದಕೈ ಸಿಕ್ಕಂತೆ ಆಯಿತು, ಒಂದು ಸ್ಪಷ್ಟ ಜೀವನೋದ್ದೇಶ ತಿಳಿಯಿತು. ಆತ್ಮಶಕ್ತಿ, ಆನಂದಶಕ್ತಿ ಹಾಗೂ ಮುಕ್ತಿಮಾರ್ಗಗಳ ದಾರಿ ಯಾವುದೆಂದು ತಿಳಿಯಿತು. ಇದಲ್ಲದೆ, ಧ್ಯಾನದಿಂದ ಸಿಗುವ ಆನಂದ ಮತ್ತು ಶಕ್ತಿಗಳು ಅಲ್ಪಅಲ್ಪವಾಗಿಯಾದರೂ ನನ್ನ ಅರಿವಿಗೆ ಬರುತ್ತಿವೆ.

ಪೂಜ್ಯರೆ, ಭವ್ಯ ಭಾರತದ ಕನಸು ಕಂಡ ಸ್ವಾಮಿ ವಿವೇಕಾನಂದರ ಆದರ್ಶದಿಂದ ನಾನು ಸ್ಫೂರ್ತಿಗೊಂಡು ನನ್ನ ಜೀವನದ ಬಹುಪಾಲನ್ನು ಸಮಾಜಕ್ಕೆ ನೀಡುವ ದೃಢಸಂಕಲ್ಪ ಮಾಡಿದ್ದೇನೆ. ಇದು ಬರೀ ಸಂಕಲ್ಪ ಮಾತ್ರವಲ್ಲ, ವಾಸ್ತವ ಕೂಡ. ಮಠದ ಅಡಿಯಲ್ಲಿ ನಡೆಯುತ್ತಿರುವ ವಿದ್ಯಾಶಾಲೆ ಹಾಗೂ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ – ಇವೆರಡೂ ಸಾಕ್ಷಾತ್ ಸರಸ್ವತಿಯ ಜೀವಂತರೂಪವಾಗಿವೆ. ಈ ಎರಡೂ ಸಂಸ್ಥೆಗಳು ದೇಶದ ಬಹು ದೊಡ್ಡ ಶಕ್ತಿಕೇಂದ್ರಗಳು ಎಂದರೆ ತಪ್ಪಾಗಲಾರದು. ಇವು ಭವ್ಯ ಭಾರತದ ಮೌಲ್ಯಯುತ ಯುವಶಕ್ತಿ ರೂಪುಗೊಳ್ಳುತ್ತಿರುವ ಭರವಸೆಯ ಕೇಂದ್ರಗಳೇ ಸರಿ.

'ಬಣ್ಣದ ಲೋಕವೇ ಸತ್ಯ' ಎಂಬ ಭ್ರಮೆಯಲ್ಲಿರುವ ಇಂದಿನ ಯುವಕರಿಗೆ ಸ್ಫೂರ್ತಿದಾಯಕ ಮಾರ್ಗದರ್ಶಕರು ಬೇಕಾಗಿದ್ದಾರೆ. ಈಗಿನ ಯುವಕರಲ್ಲಿ ಶಕ್ತಿ, ಯುಕ್ತಿ, ಹಂಬಲ ಎಲ್ಲವೂ ಸುಪ್ತವಾಗಿವೆ. ಆದರೆ ಅವುಗಳನ್ನು ಎಚ್ಚರಗೊಳಿಸಬೇಕಾಗಿದೆ. ಆದ್ದರಿಂದ ಇಂತಹ ಶಿಬಿರಗಳನ್ನು ಹಳ್ಳಿಗಳಲ್ಲಿ ಆಯೋಜಿಸಿದರೆ ಅದೆಷ್ಟೋ ಯುವಕರು ಶಕ್ತಿವಂತರಾಗುವುದರಲ್ಲಿ ಅನುಮಾನವೇ ಇಲ್ಲ. ಆಗ ಮಾತ್ರ ವಿವೇಕಾನಂದರು ಕಂಡ ಭವ್ಯಭಾರತ, ಶಕ್ತಭಾರತ, ಗುರುಭಾರತದ ನಿರ್ಮಾಣ ಸಾಧ್ಯ.

ಗಜೇಂದ್ರ
ಪಿ. ಮೈಸೂರು.

ಎಲ್ಲೋ, ಎಲ್ಲರೂ ಮೇಲೆ ತುಳಿದಾಡುವ ಕಗ್ಗಲ್ಲಿನಂತೆ ಬಿದ್ದಿದ್ದೆ. ನನ್ನ ಗುರುಗಳು ನನಗೊಂದು ಅವಕಾಶವನ್ನು ಕಲ್ಪಿಸಿ ಶ್ರೀರಾಮಕೃಷ್ಣ ಆಶ್ರಮಕ್ಕೆ ಕಳುಹಿಸಿದರು. ಆಶ್ರಮಕ್ಕೆ ಪ್ರವೇಶ ಮಾಡುವಾಗಲೇ ನನಗೆ ಒಂದು ರೀತಿಯ ರೋಮಾಂಚನಕಾರಿ ಅನುಭವವಾಯಿತು. ಯಾಂತ್ರಿಕ ಜೀವನವಿರುವ ಮೈಸೂರಿನಲ್ಲಿ, ಈ ಆಶ್ರಮವು ಶಾಂತಿಯ ಗಗನಕುಸುಮವಾಗಿದೆ. ಸದಾ ವಾಹನಗಳ, ಬದುಕಿನ ಜಂಜಾಟದಲ್ಲಿರುವ ನನಗೆ, ಶ್ರೀರಾಮಕೃಷ್ಣ ಆಶ್ರಮದ ಪ್ರವೇಶದಿಂದಲೇ ಒಂದು ದಿಗ್ದರ್ಶನವಾಯಿತು.

ಮೈಸೂರಿನ ಹೃದಯಭಾಗದಲ್ಲಿರುವ ಈ ಆಶ್ರಮದಲ್ಲಿ ಪಕ್ಷಿಗಳ ಕೂಗು, ವೀರಸಾಧುಗಳ ಕಂಠನುಡಿ, ಅವರ ಕೇಸರಿ, ಶ್ವೇತ ವಸ್ತ್ರಗಳು, ಧ್ಯಾನ, ಪ್ರಾರ್ಥನೆ, ಸುಂದರ ವಾತಾವರಣ – ಇವೆಲ್ಲವೂ ನನ್ನನ್ನು ಮಂತ್ರಮುಗ್ಧನನ್ನಾಗಿಸಿದವು. ಧ್ಯಾನದಲ್ಲಿ ಈ ರೀತಿಯ ವಿದ್ಯುತ್‌ಶಕ್ತಿಯಿದೆ ಎಂಬುದು ಗೊತ್ತಾದುದೇ ಶ್ರೀರಾಮಕೃಷ್ಣ ಆಶ್ರಮದಲ್ಲಿ.

ಒಬ್ಬ ವ್ಯಕ್ತಿ ಹುಟ್ಟುತ್ತಾನೆ, ಬದುಕುತ್ತಾನೆ, ಸಾಯುತ್ತಾನೆ. ಇಡೀ ಜೀವನವೇ ಉಳಿವಿಗಾಗಿನ ಹೋರಾಟವಾಗಿಬಿಟ್ಟಿದೆ. ಆದರೆ ಈ ಸನ್ನಿವೇಶದಲ್ಲಿ, 'ಒಬ್ಬ ವ್ಯಕ್ತಿ ಸಮಾಜಕ್ಕೆ ಏನು ನೀಡಿದ?' ಎಂಬುದು ಮುಖ್ಯ. ಆದ್ದರಿಂದ ಆಧ್ಯಾತ್ಮಿಕತೆಯನ್ನು ಮೈಗೂಡಿಸಿಕೊಂಡು ಈ ಸಮಾಜಕ್ಕೆ ಏನಾದರೊಂದನ್ನು ಕೊಡಬೇಕು ಎಂಬುದನ್ನು ನನಗೆ ಅರ್ಥೈಸಿಕೊಟ್ಟಿದ್ದು ಶ್ರೀರಾಮಕೃಷ್ಣ ಆಶ್ರಮ.

ಭಾರತದಲ್ಲಿ ಅರ್ಧದಷ್ಟು ಜನ ಯುವಕರಿದ್ದಾರೆ. ಆದ್ದರಿಂದ ಭಾರತವನ್ನು 'ಯುವರಾಷ್ಟ್ರ' ಎಂದು ಕರೆಯುತ್ತಾರೆ. ಇಂತಹ ಯುವರಾಷ್ಟ್ರದಲ್ಲಿ ಯುವಪೀಳಿಗೆಗೆ ವ್ಯಕ್ತಿತ್ವ ನಿರ್ಮಾಣ ಮಾಡಿಕೊಳ್ಳಲು, ಶುದ್ಧಮನಸ್ಸಿನಿಂದ ಆಧ್ಯಾತ್ಮಿಕ ಜೀವನವನ್ನು ಅಳವಡಿಸಿಕೊಳ್ಳಲು ಮತ್ತು ಆಧ್ಯಾತ್ಮಿಕ ಜೀವನವನ್ನು ನಡೆಸಲು, ತ್ಯಾಗ ಮತ್ತು ಸೇವೆ ಎಂಬ ನಿಸ್ವಾರ್ಥ ಭಾವನೆಗಳನ್ನು ಅಳವಡಿಸಿಕೊಳ್ಳಲು ಶ್ರೀರಾಮಕೃಷ್ಣ ಆಶ್ರಮವು ನಡೆಸುತ್ತಿರುವ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಜೀವನಚರಿತ್ರೆ ಮತ್ತು ಸಂದೇಶವನ್ನು ಸಾರುವಂತಹ ಶಿಬಿರಗಳು ಸಹಕಾರಿಯಾಗಿವೆ. ಮನುಕುಲದ ಉದ್ಧಾರಕ್ಕೆ ಆಧ್ಯಾತ್ಮಿಕ ಕ್ರಾಂತಿಯೊಂದೇ ದಾರಿ ಎಂಬುದು ಸ್ವಾಮಿ ವಿವೇಕಾನಂದರ ವಾಣಿ. ಇದನ್ನು ಆಧಾರವಾಗಿಟ್ಟುಕೊಂಡು ಶಿಬಿರದಲ್ಲಿ ಶಿಬಿರಾರ್ಥಿಗಳಿಗೆ ಬೆಳಗ್ಗೆ ಧ್ಯಾನ, ಪ್ರಾರ್ಥನೆ, ಭಜನೆ; ರಾತ್ರಿ ಕೂಡ ಭಜನೆ, ಪ್ರಾರ್ಥನೆ ಮಾಡಿಸುತ್ತಾರೆ. ಇದರಿಂದ ಶಿಬಿರಾರ್ಥಿಗಳು ಪ್ರಾರ್ಥನೆ ಧ್ಯಾನಗಳ ಮಹತ್ವ ಹಾಗೂ ಅವುಗಳ ಉಪಯುಕ್ತತೆಗಳನ್ನು ತಿಳಿದು ಆಧ್ಯಾತ್ಮಿಕತೆಯಲ್ಲಿ ಒಲವು ಮೂಡಿಸಿಕೊಳ್ಳಲು ಸಹಕಾರಿಯಾಗುತ್ತದೆ. ಹಾಗೆಯೇ, ಆಧ್ಯಾತ್ಮಿಕ ಜೀವನವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ದೇಶದ ಒಬ್ಬ ಉತ್ತಮ ಪ್ರಜೆಯಾಗಿ ಬೆಳೆಯಲು ಸಾಧ್ಯವಿದೆ. ನಾವು – ಅಂದರೆ ಶಿಬಿರಾರ್ಥಿಗಳು – ಈ ಶಿಬಿರದಲ್ಲಿ ಕಲಿತ ಭಜನೆ, ಪ್ರಾರ್ಥನೆ, ಧ್ಯಾನದ ಮಹತ್ವವನ್ನು ನಮ್ಮವರೊಡನೆ ಹಂಚಿಕೊಂಡು, ಅವರನ್ನು ಕೂಡ ದೇಶದ ಉತ್ತಮ ಪ್ರಜೆಗಳಾಗಿ ರೂಪಿಸಲು ಇದರಿಂದ ಅವಕಾಶ ಸಿಕ್ಕಿದೆ. ಇದರ ಪರಿಣಾಮವಾಗಿ, ಹನಿ ಹನಿ ಕೂಡಿ ಹಳ್ಳವಾದಂತೆ ಒಬ್ಬರು ಇನ್ನೊಬ್ಬರು ಕೂಡಿ ಇಡೀ ದೇಶವೇ ಒಂದು ಉತ್ತಮ ಆಧ್ಯಾತ್ಮಿಕ ಕ್ಷೇತ್ರವಾಗಿ ಪರಿಣಮಿಸುತ್ತದೆ. ಇದು ರಾಮಕೃಷ್ಣ ಆಶ್ರಮದಿಂದ ಮಾತ್ರ ಸಾಧ್ಯ. ಅದಕ್ಕಾಗಿ ಆಶ್ರಮಕ್ಕೆ ನಾನು ಚಿರಋಣಿಯಾಗಿರುತ್ತೇನೆ.

ಲಾಂಗಮನ್ ಇಂಗ್ಲೀಷ್ ನಿಘಂಟಿನಲ್ಲಿ **'ವ್ಯಕ್ತಿಯ ಪೂರ್ಣಸ್ವಭಾವ ಅಥವಾ ಚಾರಿತ್ರ್ಯವೇ ಅವನ ವ್ಯಕ್ತಿತ್ವ'** ಎಂದು ಹೇಳಿದೆ. ಇಂತಹ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಶ್ರೀರಾಮಕೃಷ್ಣ ಆಶ್ರಮವು ಸಹಾಯಕವಾಗಿದೆ. ಹೇಗೆಂದರೆ, ಆಶ್ರಮವು ತಾನು ನಡೆಸಿದ ವ್ಯಕ್ತಿತ್ವವಿಕಸನ ಶಿಬಿರದ ಮೂಲಕ ವಿದ್ಯಾರ್ಥಿಗಳಲ್ಲಿರುವ ಚಾರಿತ್ರ್ಯ, ಪ್ರತಿಭೆ, ಕಾರ್ಯಪ್ರಭುತ್ವ, ಚಿಂತನಾಶಕ್ತಿ, ಸೇವಾಮನೋಭಾವ ಇತ್ಯಾದಿಗಳನ್ನು ಹೊರತೆಗೆದು ದೇಶದ ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತಿದೆ. ಸಾಧನೆಗೈದ, ಮಹಾನ್‌ಜ್ಞಾನವುಳ್ಳ ಸ್ವಾಮೀಜಿಯವರ ಮಾತುಗಳಿಂದ, ಅವರ ನಡತೆಯಿಂದ, ಈ ಶಿಬಿರದಲ್ಲಿ ಭಾಗವಹಿಸಿದ ನನ್ನಲ್ಲಿ ಅಂತರ್ಗತವಾಗಿದ್ದ ಚಾರಿತ್ರ್ಯ ಮತ್ತು ಸೇವಾಮನೋಭಾವ ಹೊರಚಿಮ್ಮುತ್ತಿದೆ. ಅದಲ್ಲದೇ ಕೆಲವು ಮೌಲ್ಯಮಾಪನ ಪರೀಕ್ಷೆಗಳಿಂದ ನನ್ನಲ್ಲಿರುವ ಚಿಂತನಾಶಕ್ತಿಯ ಸಾಮರ್ಥ್ಯ ನನಗೆ ಈಗ ಅರಿವಾಗಿದೆ. 'ನಿಸ್ವಾರ್ಥವೇ ಯಶಸ್ಸಿನ ಗುಟ್ಟು' ಎಂಬಂತೆ ಯಾವುದೇ ಒಬ್ಬ ವ್ಯಕ್ತಿಯು ದೇವರಿಗೆ ಪ್ರಿಯನಾಗಬೇಕಾದರೆ ಅವನು ಸ್ವಾರ್ಥರಹಿತ ಸೇವೆಯಲ್ಲಿ ತೊಡಗಬೇಕು. 'ಜನರ ಸೇವೆಯೇ ಜನಾರ್ದನನ ಸೇವೆ.' ಆದ್ದರಿಂದ ನಾವು ಬಡಜನರಿಗೆ, ಅಂಗವಿಕಲರಿಗೆ, ಅನಕ್ಷರಸ್ಥರಿಗೆ, ನೊಂದವರಿಗೆ ನಿಸ್ವಾರ್ಥಭಾವನೆಯಿಂದ ಮಾಡುವ ಸೇವೆ ನಮ್ಮನ್ನು ಯಶಸ್ಸಿನ ಕಡೆ ಕೊಂಡೊಯ್ಯುತ್ತದೆ. ಇಂತಹ ನಿಸ್ವಾರ್ಥ ಸೇವೆಯನ್ನೇ ಧ್ಯೇಯವಾಗಿಟ್ಟುಕೊಂಡಿರುವ ಶ್ರೀರಾಮಕೃಷ್ಣ ಆಶ್ರಮವು ಈ ಶಿಬಿರದ ಮೂಲಕ ಈಗಿನ ಯುವಪೀಳಿಗೆಗೆ ಅದರ ಮಹತ್ವವನ್ನು ಅರ್ಥಮಾಡಿಸಲು ಪ್ರಯತ್ನಿಸಿದೆ. ಶಿಬಿರಾರ್ಥಿಗಳಾದ ನಾವು ಸ್ವಾಮೀಜಿಯವರ ಮತ್ತು ಆಶ್ರಮದ ಭಕ್ತರ ನಿಸ್ವಾರ್ಥ ಸೇವೆಯನ್ನು ಕಂಡು ಆಶ್ಚರ್ಯಭರಿತರಾದೆವು. ಏಕೆಂದರೆ ಯಾವುದೇ ಕಡೆ ಕಾರ್ಯಕ್ರಮಕ್ಕೆ ಹೋದರೆ, ಅಲ್ಲಿ ಈ ರೀತಿಯಾಗಿ ನಿಸ್ವಾರ್ಥಭಾವನೆಯಿಂದ ಸೇವೆಯನ್ನು ಮಾಡುವುದನ್ನು ನಾನು ಕಂಡಿರಲಿಲ್ಲ.

**– ಚೆನ್ನಕೇಶವ ಎನ್. ಆಚಾರ್ಯ, ಬೈಂದೂರು**

**ಈ** ಶಿಬಿರದಿಂದ ಸ್ವಾಮಿ ವಿವೇಕಾನಂದರು, ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆಯವರ ಬಗ್ಗೆ ಹೆಚ್ಚಿನ ರೀತಿಯಲ್ಲಿ ತಿಳಿಯಲು ನನಗೆ ಸಾಧ್ಯವಾಯಿತು. ಆಶ್ರಮದಲ್ಲಿನ ಪ್ರಾರ್ಥನೆಯನ್ನು ನಾನು ಕೂಡ ದಿನವೂ ಅಭ್ಯಾಸ ಮಾಡಬೇಕೆಂದೆನಿಸಿತು. ನನ್ನ ಇದುವರೆಗಿನ ಜೀವನದಲ್ಲಿ, ನಾನು ಸಂಪೂರ್ಣ ಭಕ್ತಿಭಾವದಿಂದ ಇದ್ದ ದಿನಗಳೆಂದರೆ ಈ ಶಿಬಿರದ ದಿನಗಳು. ಈ ಶಿಬಿರದಿಂದ ನಾನು ಮಾನವೀಯ ಮೌಲ್ಯಗಳನ್ನು ಕಲಿತಿದ್ದೇನೆ; ಧಾರ್ಮಿಕ ಆಚರಣೆಯಲ್ಲಿ ನಂಬಿಕೆಯನ್ನು ಹೆಚ್ಚಿಸಿಕೊಂಡಿದ್ದೇನೆ. ಅಲ್ಲದೇ ಅದನ್ನು ಪ್ರತಿದಿನವೂ ತಪ್ಪದೆ ಪಾಲಿಸುತ್ತಿದ್ದೇನೆ. ಈ ಶಿಬಿರದ ನಂತರ ನನ್ನ ಜೀವನಶೈಲಿಯನ್ನು ಬದಲಿಸಿಕೊಂಡಿದ್ದೇನೆ. ಪ್ರತಿದಿನವೂ ಪೂಜೆ, ಧ್ಯಾನ, ಪ್ರಾರ್ಥನೆಯಲ್ಲಿ ನಿರತನಾಗಿದ್ದೇನೆ. ನಿತ್ಯ ಕನಿಷ್ಠ ಒಂದು ಘಂಟೆಯಾದರೂ ದಿವ್ಯತ್ರಯರ ವಿಚಾರಧಾರೆಗಳನ್ನು ಅಧ್ಯಯನ ಮಾಡುತ್ತಿದ್ದೇನೆ. ಇಂತಹ ಆಚರಣೆಯಿಂದ ನನ್ನ ಮನಸ್ಸಿಗೂ ನೆಮ್ಮದಿ ಮತ್ತು ಆನಂದ ದೊರಕುವುದನ್ನು ಅರಿತಿದ್ದೇನೆ. ಅಲ್ಲದೆ ಇದರಿಂದ, "ಭಗವಂತನ ಸ್ಮರಣೆಯಲ್ಲೇ ನಿಜವಾದ ಆನಂದವಿದೆ" ಎಂಬುದನ್ನು ತಿಳಿದುಕೊಂಡಿದ್ದೇನೆ. ಒಟ್ಟಿನಲ್ಲಿ ಈ ಶಿಬಿರದ ನಂತರ ನನ್ನ ದಿನನಿತ್ಯದ ಜೀವನಶೈಲಿಯೇ ಬದಲಾಗಿದೆ. ಶ್ರೀರಾಮಕೃಷ್ಣ ಪರಮಹಂಸರ ಮೇಲೆ ಅಚಲ ಭಕ್ತಿ ಉಂಟಾಗಿದೆ. ಅವರ ಜೀವನಚರಿತ್ರೆಯನ್ನು ಹಾಗೂ ಸಂದೇಶಾಮೃತಗಳನ್ನು ಓದುವಾಗ ರೋಮಾಂಚನದ ಅನುಭವವಾಗುತ್ತದೆ. ಅವರು ಕಾಳಿಯ ದರ್ಶನಕ್ಕಾಗಿ ಪ್ರಾಣವನ್ನೇ ಬಿಡಲು ತಯಾರಾಗಿದ್ದನ್ನು ನೆನೆದರೆ ಆಶ್ಚರ್ಯವಾಗುತ್ತದೆ. ಶ್ರೀರಾಮಕೃಷ್ಣರ ಜೀವನ ನನ್ನಲ್ಲಿ ದೇವರ ಬಗ್ಗೆ ನಿಸ್ಸಂದೇಹವಾದ ನಂಬಿಕೆಯನ್ನು ಹುಟ್ಟಿಸಿತು. ಶ್ರೀಮಾತೆಯವರ ಜೀವನ ಇಂದಿನ ಸ್ತ್ರೀಯರಿಗೆ ಆದರ್ಶವಾಗಿದೆ. ಶ್ರೀಮಾತೆಯವರ ಪತಿಭಕ್ತಿ, ಜನರ ಮೇಲೆ ಅವರಿಗಿದ್ದ ಪ್ರೀತಿ, ವಾತ್ಸಲ್ಯ, ಅನುಕಂಪ ನಮಗೆ ಮಾರ್ಗದರ್ಶಕವಾಗಿವೆ. ಒಟ್ಟಿನಲ್ಲಿ ಶ್ರೀಮಾತೆಯವರು ಧ್ಯಾನಮಯ ತಪಸ್ವಿನಿ. ಇವರ ಆಲೋಚನೆಗಳು ಮತ್ತು ಅವರು ತಮ್ಮ ಪತಿಯ ಆಧ್ಯಾತ್ಮಿಕ ಸಾಧನೆಗೆ ಸಹಕರಿಸಿದ ರೀತಿ ನಿಜಕ್ಕೂ ಅತ್ಯದ್ಭುತ. ಶ್ರೀಮಾತೆಯವರು ಒಬ್ಬ ಮಹಾತ್ಯಾಗಿಯಾಗಿದ್ದಾರೆ. ಅದೇ ರೀತಿ ಈ ಜಗತ್ತು ಕಂಡ ಮತ್ತೊಂದು ಧ್ರುವತಾರೆ, ಪುರುಷಸಿಂಹ ಹಾಗೂ ವೀರ ಸಂನ್ಯಾಸಿಯೆಂದರೆ ಸ್ವಾಮಿ ವಿವೇಕಾನಂದರು. ಹಿಂದೂಧರ್ಮದ ಪುನರುದ್ಧಾರಕ್ಕಾಗಿ ಜನ್ಮವೆತ್ತಿದ ಈ ದೈವಮಾನವನ ವೀರನುಡಿಗಳು ನನ್ನ ಜೀವನದ ಏಳಿಗೆಗೆ ಕಾರಣವಾಗಿವೆ. ಇವರು ಸಾರಿದ 'ತ್ಯಾಗ ಮತ್ತು ಸೇವೆ' ಎಂಬ ಆದರ್ಶಗಳನ್ನು ನನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು ಸಂಪೂರ್ಣವಾಗಿ ಪ್ರಯತ್ನಪಡುತ್ತೇನೆ. ವಿವೇಕಾನಂದರ ಜೀವನ ಮತ್ತು ಸಂದೇಶಗಳು ನನ್ನ ದೇಹದಲ್ಲಿ ವಿದ್ಯುತ್‌ಸಂಚಾರವಾಗುವಂತೆ ಮಾಡುತ್ತವೆ. ಇವರು ಸ್ಥಾಪಿಸಿದ ರಾಮಕೃಷ್ಣ ಮಹಾಸಂಘ ಇಂದು ನಮ್ಮೆಲ್ಲರಿಗೂ ಜ್ಞಾನಜ್ಯೋತಿಯನ್ನು ಹಂಚುತ್ತಿದೆ. 'ರಾಮಕೃಷ್ಣ ಮಹಾಸಂಘವು ಶ್ರೀರಾಮಕೃಷ್ಣರ ಭೌತಿಕ ಶರೀರವಿದ್ದಂತೆ' ಎಂಬ ಸ್ವಾಮಿ ವಿವೇಕಾನಂದರ ಮಾತು ಸತ್ಯವಾಗಿದೆ. ಈ ಆಶ್ರಮಗಳ ಮೂಲಕ ನಾವು ಶ್ರೀರಾಮಕೃಷ್ಣರನ್ನು ಕಾಣಬಹುದು. ಆಶ್ರಮದ ಪೂಜೆ, ಧ್ಯಾನ, ಪ್ರಾರ್ಥನೆ, ಉನ್ನತ ವಿಚಾರಧಾರೆಯ ಪ್ರಸಾರದಿಂದ ನಮ್ಮಲ್ಲಿ ಉತ್ತಮ ಭಾವನೆಗಳು ನೆಲೆಸುತ್ತವೆ. ಈ ಮಹಾಸಂಘದ ಶಾಖೆಗಳಾದ ಶ್ರೀರಾಮಕೃಷ್ಣ ಆಶ್ರಮಗಳು ಜನರಲ್ಲಿ ಶಾಂತಿ–ನೆಮ್ಮದಿಯನ್ನು ತಂದಿವೆ. ಜನರು ಈ ಆಶ್ರಮಗಳ ಸಂಪರ್ಕದಿಂದ ತಮ್ಮ ಜೀವನದಲ್ಲಿ ಸಂತೋಷ–ಶಾಂತಿಯನ್ನು ಕಾಣಬಹುದಾಗಿದೆ. **– ಪ್ರಸನ್ನ ಕುಮಾರ, ಪಾಂಡವಪುರ**

ತಮ್ಮಂಥ ತ್ಯಾಗಿಗಳಿಂದ ವಿಶಿಷ್ಟವಾಗಿ ರಂಗುವೈಭವವನ್ನು ಪಡೆದಿರುವ ಆ ಆಶ್ರಮ ನಮಗೆ ತೋರಿಸಿದ ನಿಸರ್ಗ ಸಹಜಪ್ರೀತಿ, ಹೆಜ್ಜೆ ಹೆಜ್ಜೆಗೂ ಹೇಳಿದ ತ್ಯಾಗಜೀವಿಗಳ ಕಥೆಗಳು ಚಿರಕಾಲ ನನ್ನ ಮನಃಪಟಲದಲ್ಲಿ ಉಳಿಯಿತು. ಭಗವದ್‌ಸದೃಶರಾದ ಪರಮಪೂಜ್ಯ ಮುಕ್ತಿದಾನಂದ ಸ್ವಾಮೀಜಿಯವರು, ತಮ್ಮದೇ ಹಾವ-ಭಾವದಲ್ಲಿ ನಮ್ಮಂತಹ ಅನೇಕ ಯುವಕರ ಮನಸ್ಸನ್ನು ಭಾವಪೂರ್ಣಗೊಳಿಸಿದರು. ನಾನಂತೂ ಆಶ್ರಮಕ್ಕೆ ಬಂದ ಪ್ರಥಮ ದಿನವೇ, ಅವರನ್ನು ನೋಡಿ ಪರವಶನಾದೆ. ಸಂನ್ಯಾಸಿ ಜೀವನದ ಮಹೋನ್ನತ ಧ್ಯೇಯ, ಉದ್ದೇಶ ಹಾಗೂ ನಿಸ್ವಾರ್ಥತೆಗಳ ಬಗ್ಗೆ ಅವರು ಎಲ್ಲರ ಮನದಲ್ಲಿ ನಿಲ್ಲುವಂತೆ, ತ್ಯಾಗಜೀವನಕ್ಕಾಗಿ ಮನತುಡಿಯುವಂತೆ ತಮ್ಮ ಮಾತುಗಳಲ್ಲಿ ಹೇಳಿದ್ದಾರೆ. ಕರ್ನಾಟಕದ ವಿವಿಧೆಡೆಯಿಂದ ಬಂದುಸೇರಿದ ಯುವಸಮುದಾಯಕ್ಕೆ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ ಹಾಗೂ ಶ್ರೀಮಾತೆ ಶಾರದಾದೇವಿಯವರ ಅಜೇಯ ಘನತೆ, ಅಸ್ತಿತ್ವದ ಮಹಾ ಪರಿಚಯವಾದ ಏಕೈಕ ಸ್ಥಳ **ಶ್ರೀರಾಮಕೃಷ್ಣ ಆಶ್ರಮ, ಮೈಸೂರು**. ನಾ ಕಂಡಂತೆ ಮೈಸೂರಿನ ಆಶ್ರಮದ ಎಲ್ಲಾ ತ್ಯಾಗಿಗಳಲ್ಲಿಯೂ ವೀರಸಂನ್ಯಾಸಿ ವಿವೇಕಾನಂದರ ಮೂಲಛಾಯೆ ನೆಲೆಗೊಂಡಿತ್ತು. ಹಸನ್ಮುಖಿಗಳಾಗಿ, ದಿವ್ಯವ್ಯಕ್ತಿತ್ವದ ಮೂಲಕ ಸ್ಫೂರ್ತಿಯ ಕಿರಣಪುಂಜವನ್ನು ನಮ್ಮ ಮೇಲೆ ಗುರಿಯನ್ನಾಗಿರಿಸಿದ ಆ ಎಲ್ಲ ತ್ಯಾಗವೀರರಿಗೆ ನಮ್ಮೆಲ್ಲರ ತನು-ಮನದಿಂದ ಸಮರ್ಪಿಸುವ ನಮಸ್ಕಾರಗಳು. ದಿವ್ಯತ್ರಯರು ನೆಲೆಗೊಂಡಂತಹ ಈ ಭವ್ಯನೆಲೆಗೆ ನಾವು ಬಂದಿದ್ದರಿಂದ, ಅವರೊಂದಿಗೆ ನಾವು ನಿಮ್ಮ ಮುಖೇನ ಸಂವಹನಗೊಂಡಂತೆಯೇ ಭಾಸವಾಗಿತ್ತು. ಅಂತಹ ಸುವರ್ಣ ಅವಕಾಶಕ್ಕೆ ಕಾರಣವಾದವರು ತಾವು. ನಿಮ್ಮ ಮುಖೇನ ನಾವು ಕಂಡದ್ದು ದಿವ್ಯತ್ರಯರ ಭವ್ಯ ಜೀವಂತಿಕೆ ಹಾಗೂ ಈ ಜಗಕ್ಕೆ ಸರ್ವಕಾಲಕ್ಕೂ ಸಾರಬೇಕಾದ ಏಕೈಕ ಸಂದೇಶ. ಅದುವೇ 'ತ್ಯಾಗ' ಮತ್ತು 'ಸೇವೆ'.

– ಮಲ್ಲಿಕಾರ್ಜುನ, ದಾವಣಗೆರೆ

## ವಿವೇಕಚೇತನ ಶಿಬಿರದ ಬಗ್ಗೆ

೧. ದೇಶದ ರಾಜಕೀಯ ಪರಿಸ್ಥಿತಿ ಮತ್ತು ಸಾಮಾಜಿಕ ಪರಿಸ್ಥಿತಿಗಳು ಇಂದು ನಡು ಸಮುದ್ರದಲ್ಲಿ ಮುಳುಗಿವೆ. ಅವನ್ನು ದಡಸೇರಿಸಲು ಇಂಥ ಶಿಬಿರಗಳು ಅಗತ್ಯ. ಇಲ್ಲಿ ನೀಡಿರುವ ವಿಚಾರಗಳನ್ನು ನಾನು ಅನುಷ್ಠಾನಕ್ಕೆ ತರುತ್ತೇನೆ.

೨. ಸಮಾಜದ ಧರ್ಮಗಳನ್ನು ತಿಳಿದುಕೊಳ್ಳಲು ಮತ್ತು ರಕ್ಷಿಸಲು ಇಂತಹ ಶಿಬಿರಗಳು ಪ್ರಸ್ತುತ ಸಮಾಜಕ್ಕೆ ವರದಾನವಾಗಿವೆ.

೩. ಯುವಕರಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಇಂತಹ ಶಿಬಿರಗಳು ಅಗತ್ಯ.

೪. ಇದು ಕೇವಲ ಮೂರು ದಿನಗಳ ಶಿಬಿರವಾದರೂ, ನನ್ನ ಜೀವನದುದ್ದಕ್ಕೂ ಅಚ್ಚಳಿಯಿಂದ ಉಳಿಯುವಂತೆ ಮಾಡಿದೆ.

೫. ಸಮಾಜ ಸುಧಾರಣೆಗೆ, ಸಮಾಜದ ಬದಲಾವಣೆಗೆ ಮತ್ತು ದೇಶದ ಅಭಿವೃದ್ಧಿಗೆ ಇಂತಹ ಶಿಬಿರಗಳು ಅವಶ್ಯವಾಗಿವೆ.

೬. ಇಂತಹ ಶಿಬಿರಗಳಿಂದ ಯುವಕರಲ್ಲಿ ಆಧ್ಯಾತ್ಮಿಕತೆ ಮತ್ತು ಸಂಸ್ಕೃತಿಗಳ ಬಗ್ಗೆ ಅರಿವು ಮೂಡುತ್ತದೆ.

೭. ನಮ್ಮ ಯುವಚೇತನ ಅಥವಾ ಯುವಶಕ್ತಿ ಸ್ಫೂರ್ತಿಗೊಳ್ಳಲು ಇಂತಹ ಶಿಬಿರಗಳು ವರದಾನ.

ದರ್ಶನ್ ಎಂ.ವಿ. ಸರ್ಕಾರಿ ಪ್ರಥಮದರ್ಜೆ ಕಾಲೇಜು, ಮಾಗಡಿ, ರಾಮನಗರ ಜಿಲ್ಲೆ

**ಮೂರು** ದಿನಗಳ ಕಾಲ ನಡೆದ ಈ ಶಿಬಿರವು ನನ್ನ ಜೀವನದಲ್ಲಿ ಬಹು ಪ್ರಮುಖವಾದ ದಿನಗಳು ಎಂದು ನಾನು ಭಾವಿಸುತ್ತೇನೆ.

– ಅನಂತ ಬಿ. ಮೇಲುಕೋಟೆ

**ಆಶ್ರಮದಲ್ಲಿ** ನಾವಿದ್ದ ಮೂರು ದಿನಗಳಲ್ಲಿ ಪ್ರತಿಯೊಂದು ಕ್ಷಣವೂ ಆನಂದದಿಂದಿದ್ದೆವು. ಒಂದು ಕೆಟ್ಟ ಆಲೋಚನೆಯೂ ನಮ್ಮ ಬಳಿ ಸುಳಿಯಲಿಲ್ಲ. ಇವೆಲ್ಲ ನಿಮ್ಮಂಥ ಪೂಜ್ಯರ ಧ್ಯಾನದ ಫಲವೆಂದು ಭಾವಿಸುತ್ತೇನೆ. ನಾನು ಆಶ್ರಮದಲ್ಲಿ ಕಂಡ ಒಂದು ಅದ್ಭುತವೆಂದರೆ ಅಲ್ಲಿನ ಮಕ್ಕಳಿಗೆ ದೊರಕುತ್ತಿರುವ ವಿದ್ಯಾಭ್ಯಾಸ. ವಿದ್ಯಾರ್ಥಿಗಳನ್ನು ಕೇವಲ ಪುಸ್ತಕದ ಹುಳುಗಳನ್ನಾಗಿಸದೆ, ಅವರಿಗೆ ಮೌಲ್ಯಯುತವಾದ ಜೀವನವಿದ್ಯೆಯನ್ನು ಕಲಿಸುತ್ತಿದ್ದೀರಿ. ನನಗನಿಸುತ್ತದೆ, 'ಶ್ರೀರಾಮಕೃಷ್ಣ ವಿದ್ಯಾಶಾಲೆ'ಯು ದೇಶದ ಪ್ರತಿಯೊಂದು ಹಳ್ಳಿಯಲ್ಲಿಯೂ ಇರಬೇಕಿತ್ತೆಂದು. ಇದರಲ್ಲಿ ಸಂಶಯವೇ ಇಲ್ಲ. ನಿಮ್ಮಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಆಧುನಿಕ ಸಮಾಜಕ್ಕೆ ದೊಡ್ಡ ಕೊಡುಗೆ ಯಾಗುತ್ತಾರೆ. ಇಂದಿನ ಅಸಭ್ಯವರ್ತನೆಯ ಲೋಕದ ನಡುವೆ ಇಂತಹ ಅಚ್ಚುಕಟ್ಟಾದ, ಶಿಸ್ತುಬದ್ಧವಾದ, ಸರ್ವತೋಮುಖವಾದ ಪರಿಸರಸ್ನೇಹಿ ಶಿಕ್ಷಣವನ್ನು ನೀಡುತ್ತಿರುವುದಕ್ಕೆ ಪ್ರತಿಯೊಬ್ಬರೂ ನಿಮಗೆ ಕೃತಜ್ಞರಾಗಿರಲೇಬೇಕು. ಈ ನಿಟ್ಟಿನಲ್ಲಿ ನಾನು ಹೆಮ್ಮೆ ಪಡುತ್ತೇನೆ. ಏಕೆಂದರೆ, ಮೂರು ದಿನಗಳ ಮಟ್ಟಿಗಾದರೂ ನಾನು ನಿಮ್ಮ ವಿದ್ಯಾರ್ಥಿಯಾಗಿದ್ದೆ.

ಈ ಆಧುನಿಕ ಸಮಾಜದಲ್ಲಿ ಮರೆಯಾಗುತ್ತಿರುವ ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳ ಅನುಭವವನ್ನು ನಮಗೆ ಮಾಡಿಸಿದ್ದೀರಿ. ನೀವು ನಮಗೆ ಕೊಟ್ಟ ಎಲ್ಲ ಮಾನವೀಯ ಮೌಲ್ಯಗಳನ್ನೂ ನಾವು ನಮ್ಮ ಸುತ್ತಲಿನವರಿಗೆಲ್ಲರಿಗೂ ಪಸರಿಸುತ್ತೇನೆ. ಹಾಗೂ ಅದರ ಮೂಲಕ, ಶಿಬಿರಕ್ಕೆ ನ್ಯಾಯ ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಊಹೆಗೂ ಮೀರಿದ ಶಿಬಿರವೊಂದನ್ನು ನಡೆಸಿ ಕೊಟ್ಟಿದ್ದೀರಿ. ಇದು ನಿಜಕ್ಕೂ ಅವರ್ಣನೀಯ ಅನುಭವ.

– ಅಶ್ವಥ್, ಕೊಪ್ಪ, ಚಿಕ್ಕಮಗಳೂರು ಜಿಲ್ಲೆ

ನನ್ನ ಪಾಲಿಗೆ ಆಶ್ರಮದ ಸಭಾಭವನ ಎಂಬುದು ಜೀವನ ಎಂಬ ರೈಲಿನ ತಯಾರಿಕಾ ಕೇಂದ್ರದಂತೆ, ಅಮೃತ ನುಡಿಗಳ ಸಾಗರ ದಂತೆ ಕಂಡುಬಂದಿತು. 'ಶಿವಜ್ಞಾನೇ ಜೀವಸೇವಾ' ಎಂಬ ವಾಕ್ಯದ ಸಂಪೂರ್ಣ ಅರ್ಥ ತಿಳಿದದ್ದು ಆಶ್ರಮದಲ್ಲಿಯೇ.

ಶ್ರೀರಾಮಕೃಷ್ಣರ ಜೀವನದ ಒಂದು ಘಟನೆ ಹೀಗಿದೆ: ಅವರು ತಮ್ಮಲ್ಲಿ ಅಹಂಭಾವ ಬರಬಾರದೆಂಬ ಕಾರಣಕ್ಕೆ ತಮ್ಮ ತಲೆಯ ಕೂದಲಿನಿಂದ ಶೌಚಾಲಯವನ್ನು ಸ್ವಚ್ಛ ಮಾಡಿದರಂತೆ. ಇದನ್ನು ಕೇಳಿದರೆ ಎಂತಹ ಅಹಂಭಾವನೆ ಹೊಂದಿದ ವ್ಯಕ್ತಿಯೂ ಬದಲಾಗುತ್ತಾನೆ, ಬದಲಾಗೇ ಆಗುತ್ತಾನೆ, ಬದಲಾಗಲೇಬೇಕು.

ಹೀಗಿದೆ ಆಶ್ರಮದ ಪರಿಸರ. ಹೆಚ್ಚಿನ ಯುವಕರಲ್ಲಿ ಏಕಾಗ್ರತೆಯ ಕೊರತೆ ಎದ್ದುಕಾಣುತ್ತದೆ. ಇದಕ್ಕೆ ಕಾರಣ ನಮ್ಮ ಜೀವನಶೈಲಿ. ಆ ಕೊರತೆಯ ನಿವಾರಣೆಯ ಮಾರ್ಗ **ಧ್ಯಾನ, ಭಜನೆ, ಪ್ರಾರ್ಥನೆ.** ಈ ಮೂರು ವಿಷಯಗಳನ್ನು ನಮ್ಮ ದಿನಚರಿಗಳಲ್ಲಿ ಸೇರಿಸಿಕೊಂಡರೆ ಏಕಾಗ್ರತೆ ಸಾಧ್ಯ ಎಂದು ಅದರ ಅನುಷ್ಠಾನದ ಪ್ರಾಯೋಗಿಕ ಮಾರ್ಗವನ್ನು ಈ ಶಿಬಿರದಲ್ಲಿ ತಿಳಿಸಿಕೊಟ್ಟಿದ್ದಾರೆ.

**– ಅನಂತ ಗಣಪತಿ ಹೆಗಡೆ, ಮಂಕಿ, ಹೊನ್ನಾವರ ತಾಲ್ಲೂಕು**

ಮೂರು ದಿನಗಳ ಕಾಲ ನಡೆದ ವಿವೇಕ ಯುವಚೇತನ ಶಿಬಿರದಲ್ಲಿ, ಆ ಪ್ರೇಮದ ಮಡುವಿನಲ್ಲಿ ಮುಳುಗಿದವರಲ್ಲಿ ನಾನೂ ಒಬ್ಬ. ಮೊದಲನೇ ದಿನ ಮುಕ್ತಿದಾನಂದಜಿಯವರ ಸ್ವಾಗತದ ಜೊತೆಗೆ ಆಶ್ರಮದಲ್ಲಿರುವ ಹೂವುಗಳು ನಮ್ಮನ್ನು ಸ್ವಾಗತಿಸಿದವು. ಸ್ವಾಮಿ ಜಗದಾತ್ಮಾನಂದರ ನುಡಿಗಳು ನಮಗೆಲ್ಲರಿಗೂ ಹೊಸ ಚೈತನ್ಯ ತುಂಬಿದವು. ಸಾಧುವೃಂದದವರ ಒಡನಾಟ ನಮಗೆಲ್ಲ ಸಂತೃಪ್ತಿ ದೊರಕಿಸಿತು. ಶ್ರೀಗುರುದೇವರ ಸಾನ್ನಿಧ್ಯದಲ್ಲಿ ಸಂಜೆ ನಡೆದ ಭಜನೆಗಳು ಶಾಂತಿಯನ್ನು ತಂದುಕೊಟ್ಟವು. ರಾತ್ರಿಯ ಊಟದಲ್ಲಿ ಎಲ್ಲಾ ಗೃಹಸ್ಥ ಭಕ್ತರು ತಮ್ಮ ಸಹಜ ಪ್ರೀತಿಯಿಂದ ಊಟ ಬಡಿಸಿ ಆನಂದವನ್ನು ನೀಡಿದರು. **– ಎಂ. ತೇಜಸ್ವಿ, ದಾವಣಗೆರೆ**

ವಿವೇಕಾನಂದರ ಉದಾತ್ತ ವಿಚಾರಗಳು ಈಗಿನ ಸಮಯದಲ್ಲಿ ಅತಿ ಹೆಚ್ಚಿನ ಬೆಲೆ ಹೊಂದಿದ್ದು, ಆ ತರಹದ ಜೀವನವನ್ನು, ಹಾಗೆಯೇ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು ತುಂಬಾ ಅತ್ಯಗತ್ಯ. ಆದರೆ ಎಲ್ಲಾ ವಿದ್ಯಾರ್ಥಿಗಳಿಗೆ ಈ ರೀತಿಯ ಅವಕಾಶಗಳು ದೊರಕುವುದಿಲ್ಲ. ಹೀಗಾಗಿ ಈ ರೀತಿಯ ಅವಕಾಶ ದೊರಕಿರುವ ನಾವೇ ಧನ್ಯರು ಎಂದು ಹೇಳಲು ತುಂಬಾ ಹೆಮ್ಮೆ ಎನಿಸುತ್ತದೆ.

ಈ ಶಿಬಿರದಲ್ಲಿ ಕಳೆದ ಒಂದೊಂದು ಕ್ಷಣವೂ ಅತಿ ಅಮೂಲ್ಯವಾದುದು. ಅಂತೆಯೇ ನನ್ನ ಜೀವನದ ಮರೆಯಲಾಗದ ಘಟನೆಯಾಗಿ ಇದು ಉಳಿದಿದೆ. ಇಂಥ ಅನುಭವ ಇನ್ನೂ ಹೆಚ್ಚಿನವರಿಗೆ ಲಭ್ಯವಾಗಲಿ ಹಾಗೂ ಇಂಥ ಶಿಬಿರಗಳು ಮುಂದೆ ನಿರಂತರವಾಗಿ ನಡೆಯುತ್ತಿರಲಿ ಎಂದು ನಾನು ಆಶಿಸುತ್ತೇನೆ. ನಮ್ಮ ವಿದ್ಯಾರ್ಥಿಜೀವನದಲ್ಲಿ ಇಂಥ ಉಪನ್ಯಾಸಗಳು ಹಾಗೂ ಮಾರ್ಗದರ್ಶನಗಳು ಅವಶ್ಯವಾಗಿರುತ್ತವೆ. ಈ ಬಗೆಯ ಶಿಬಿರಗಳಿಂದ ವಿದ್ಯಾರ್ಥಿಗಳು ಅನೇಕ ರೀತಿಯ ಉಪಯೋಗ ಪಡೆಯುತ್ತಾರೆ. ಸಾಧ್ಯವಾದಲ್ಲಿ ಇಂತಹ ಶಿಬಿರಗಳನ್ನು ಬೇರೆ ಬೇರೆ ಹಳ್ಳಿಗಳಲ್ಲಿ ಆಯೋಜಿಸಿರಿ. ಇದರಿಂದ ಹಳ್ಳಿಯವರಿಗೂ ಇದರ ಉಪಯೋಗ ದೊರಕುವಂತಾಗಲಿ.

**– ನಾಗರಾಜ್ ಎಸ್.ಹೆಚ್. ಸಿದ್ದಾಪುರ, ಉತ್ತರ ಕನ್ನಡ**

ವಿವೇಕಾನಂದರ ಒಂದು ಮಾತಿದೆ, "ಧೈರ್ಯವುಳ್ಳ, ಇಚ್ಛಾಶಕ್ತಿಯ ಬಲವುಳ್ಳ, ಬಲಿಷ್ಠ ಭಾರತದ ನವ ನಿರ್ಮಾಣಕ್ಕೆ ಸಿದ್ದರಿರುವ ನೂರು ನವ ಯುವಕರನ್ನು ನನಗೆ ಕೊಡಿ; ಆಗ ನಾನು ಭಾರತದೇಶದ ನವನಿರ್ಮಾಣವನ್ನು ಮಾಡಬಲ್ಲೆ." ಅವರ ಮಾತಿನಂತೆ, ಆಶ್ರಮದವರು ಇಡೀ ಕರ್ನಾಟಕದ ಪ್ರತಿಯೊಂದು ಮೂಲೆಮೂಲೆಯಿಂದಲೂ, ಪ್ರತಿಯೊಂದು ಜಿಲ್ಲೆಯಿಂದಲೂ, ಅತ್ಯಂತ ಚಟುವಟಿಕೆಯುಳ್ಳ, ನಿಸ್ವಾರ್ಥಸೇವೆಯ, ಸಹಾಯಕ ಮನೋಭಾವದ ಹಾಗೂ ಉತ್ತಮ ಸಮಾಜನಿರ್ಮಾಣದ ಪವಿತ್ರಕರ್ಮಕ್ಕೆ ಸಿದ್ಧರಿರುವ ಮುನ್ನೂರು ವಿದ್ಯಾರ್ಥಿಗಳನ್ನು (ಯುವಕರನ್ನು) ಆಹ್ವಾನಿಸಿದ್ದರು. ಅಂತಹ ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬನಾಗಿದ್ದೆನು ಎಂದರೆ ಅದು ನನ್ನ ಪೂರ್ವ ಜನ್ಮದ ಸುಕೃತ ಫಲವೇ ಎಂದು ಭಾವಿಸುವುದರಲ್ಲಿ ತಪ್ಪಿಲ್ಲ ಎನ್ನುವುದು ನನ್ನ ಅನಿಸಿಕೆ. **– ಬಿ. ಗಂಗಾಧರಾಚಾರಿ, ಕೊಟ್ಟೂರು, ಕೂಡ್ಲಿಗಿ**

ಈ ಶಿಬಿರದ ಹೆಸರು **'ವಿವೇಕ ಯುವಚೇತನ.'** 'ವಿವೇಕ' ಎಂದರೆ ಜ್ಞಾನದ ಬೆಳಕು. 'ಯುವ' ಎಂದರೆ ಅಸಾಧ್ಯವಾದುದನ್ನು ಸಾಧಿಸುವ ಸಂಪತ್ತು. 'ಚೇತನ' ಎಂದರೆ ಜಡರಹಿತವಾದದ್ದು, ಸದಾ ಚೈತನ್ಯಶೀಲವಾದದ್ದು ಎಂದು ಅರ್ಥ. ಅಂದರೆ ಜ್ಞಾನದ ಅನುಭವದಿಂದ ಅಸಾಧ್ಯವಾದದ್ದನ್ನು ಸಾಧಿಸುವ ಶಿಬಿರ ಎಂದು ಅರ್ಥ. ವಿವೇಕಾನಂದರ ಜೀವನ ಸಂದೇಶ, ರಾಮಕೃಷ್ಣ ಮಿಷನ್ ಸಾಧಿಸಿದ ಹಲವಾರು ಮಹತ್ಕಾರ್ಯಗಳು, ತ್ಯಾಗ ಸೇವೆಯ ಧ್ಯೇಯವಾಕ್ಯದೊಂದಿಗೆ ದೀನ ದಲಿತರ ಉದ್ಧಾರ, ಬಡವರ ಏಳಿಗೆ, ಶಿಕ್ಷಣವಂಚಿತರಿಗೆ ಶಿಕ್ಷಣ – ಇಂತಹ ಸೇವೆಗಳ ಕಾರ್ಯದ ಪ್ರಗತಿನೋಟ ನಮಗೆ ಈ ಶಿಬಿರದಲ್ಲಿ ತಿಳಿಯಿತು. ಊಟ, ವಸತಿ ಮತ್ತು ಶಿಬಿರಾರ್ಥಿಗಳ ಕಾಳಜಿಯು ಹೆತ್ತ ತಾಯಿಗಿಂತಲೂ ಹೆಚ್ಚಾಗಿತ್ತು ಎಂದರೆ ತಪ್ಪಾಗಲಾರದು. ಈ ಶಿಬಿರದ ಉಪನ್ಯಾಸಗಳು ಕೇವಲ ಅಧ್ಯಯನಕ್ಕಷ್ಟೇ ಸೀಮಿತವಾಗಬಾರದು; ಅದನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ನಾವೆಲ್ಲಾ ಕಾರ್ಯಪ್ರವೃತ್ತರಾಗಬೇಕು. **– ಶಿವಾಜಿ ಮ. ಪೂಜಾರ, ಕನಕಬಾಡ**

ಆಶ್ರಮದ ಭವ್ಯಕಟ್ಟಡವು ಸೊಗಸಾಗಿ ಭಕ್ತರನ್ನು ಕೈಬೀಸಿ ಕರೆಯುತ್ತಿದೆ. **ಸ್ವಚ್ಛತೆ, ಶಿಸ್ತು, ಸಮಯಪಾಲನೆ, ವ್ಯವಸ್ಥಾಪನೆ** – ಇವೆಲ್ಲವನ್ನೂ ನೋಡಿದಾಗ, ಆಶ್ರಮದ ಸ್ವಾಮೀಜಿಗಳಲ್ಲಿ ತುಂಬಿರುವ ಜ್ಞಾನ, ಬುದ್ಧಿ, ನಿಸ್ವಾರ್ಥಪರ ಗುಣಗಳು ಕಣ್ಣೆದುರಿಗೆ ಬರುತ್ತವೆ.

'ಉತ್ತಿಷ್ಠತ ಜಾಗ್ರತ' ಎಂಬ ವಿವೇಕವಾಣಿಯಂತೆ ನಾವೆಲ್ಲರೂ ಸದಾ ಜಾಗೃತರಾಗೋಣ, "ನಿದ್ರಿಸಲು ಇದು ಸಮಯವಲ್ಲ. ಸಹೋದರರೇ, ಮಾಡಬೇಕಾದ ಕಾರ್ಯ ಬಹಳವಿದೆ" ಎಂದು ಸಾರಿದ ಮಹಾನ್ ಮಾನವತಾವಾದಿ ವಿವೇಕಾನಂದರ ಕಾರ್ಯ ಮತ್ತು ಕನಸು ಈ ಶಿಬಿರದಿಂದ ಸ್ವಲ್ಪಮಟ್ಟಿಗಾದರೂ ನೆರವೇರಿದಂತಾಗಿದೆ. ರಾಜ್ಯದ ಮೂಲೆಮೂಲೆಗಳಿಂದ ಹರಿದುಬಂದ ವಿದ್ಯಾರ್ಥಿ ಯುವಪಡೆಗೆ ನೀವು ಕೊಟ್ಟ ಬೋಧನೆ, ಕಿವಿಮಾತು ಎಂದೆಂದಿಗೂ ಅಜರಾಮರ. ಸ್ವಾಮೀಜಿಯವರು ಬಯಸಿದ ಯುವಕರ ಪಡೆಯನ್ನು ನೀವು ಸಂಘಟಿಸಿ ಜೀವನದಲ್ಲಿ ನಾವೆಂದೂ ಕಂಡುಕೇಳಿರದ ಅದ್ಭುತ ಜಗತ್ತನ್ನು ತೋರಿಸಿದ್ದೀರಿ. ಹೇಳಬೇಕೆಂದರೆ ಅದೊಂದು ಆಶ್ರಮವೇ ಅಲ್ಲ. ಅದೊಂದು 'ಶಿಸ್ತು, ಶಾಂತಿ, ನೈತಿಕತೆಯ ವಿಶ್ವವಿದ್ಯಾಲಯವಿದ್ದಂತೆ'. ಏಕೆಂದರೆ ನಾನು ಇಲ್ಲಿಯವರೆಗೂ ಇಂತಹ ಸಮಯಪಾಲನೆ, ಶಿಸ್ತು, ಸ್ವಚ್ಛತೆಯನ್ನು ಬೇರೆಲ್ಲೂ ಕಂಡಿರಲಿಲ್ಲ. ಈ ಶಿಬಿರದ ಮೂಲಕ ನಾನು ಎಲ್ಲಾ ರೀತಿಯ ಅನುಭವ ಪಡೆದುಕೊಂಡೆನು. ಇದಲ್ಲದೆ ಆಶ್ರಮವು ತನ್ನದೇ ಆದ ಜಗತ್ತನ್ನು ರೂಪಿಸಿಕೊಂಡಿರುವುದನ್ನು ಕಣ್ಣಾರೆ ಕಂಡೆನು. **– ರಮೇಶ್ ಎಂ. ಉಳ್ಳಾಗಡ್ಡಿ, ಮದಭಾವಿ, ಬಿಜಾಪುರ**

ಬಾವಿಯೊಳಗಿನ ಕಪ್ಪೆಯಾಗಿದ್ದ ನಮಗೆ ಹೊರ ಪ್ರಪಂಚ ಏನೆಂದು ತೋರ್ಪಡಿಸಿ, ಹೊಸ ಹೊಸ ಸ್ನೇಹಿತರ ಪರಿಚಯಕ್ಕೆ ಕಾರಣೀಭೂತರಾದವರು ತಾವು. ಎಲ್ಲ ಸಂಪನ್ಮೂಲ ವ್ಯಕ್ತಿಗಳ ಭಾಷಣಗಳೂ ಕೂಡ, ಮುಂದೆ ನಾವು ಹೊರಬೇಕಾದ ಜವಾಬ್ದಾರಿಗಳು ಮತ್ತು ಆ ಎಲ್ಲ ಜವಾಬ್ದಾರಿಗಳನ್ನು ಪೂರೈಸಲು ಮುಂದಿನ ಕೆಲಸಕ್ಕೆ ಸಜ್ಜಾಗಲು ಪ್ರೇರಣೆ ನೀಡಿದವು. ಸ್ವತಃ ವಿವೇಕಾನಂದರೇ "ಏಳಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂಬಂತೆ ಕರೆಕೊಟ್ಟಂತೆ ಭಾಸವಾಗುತ್ತಿತ್ತು.

– ಗುರುರಾಜ ಸಿ., ಹೊಸನಗರ, ಶಿವಮೊಗ್ಗ ಜಿಲ್ಲೆ

ಮನಸ್ಸಿಗೆ ಖುಷಿ ಕೊಟ್ಟಿತು. ನಿಜವಾಗಲೂ ಹೇಳಬೇಕೆಂದರೆ ಈ ರೀತಿಯ ಆಶ್ರಮವೊಂದಿದೆ ಎಂದೇ ನನಗೆ ಗೊತ್ತಿರಲಿಲ್ಲ.

ಆಶ್ರಮದ, ವಿದ್ಯಾಶಾಲೆಯ ಸನ್ನಿವೇಶಗಳು ಭಕ್ತಿ ಮತ್ತು ಧ್ಯಾನಮಾರ್ಗಗಳ ಮೂಲಕ ಭಗವಂತನನ್ನು ಕಾಣಲು ಇರುವ ದಾರಿಗಳು ಎಂದು ನನಗೆನಿಸಿತು. ಜೊತೆಗೆ ಸ್ವಾಮೀಜಿಗಳು, ಭಕ್ತರು ಶಿಬಿರಾರ್ಥಿಗಳನ್ನು ಉಪಚರಿಸಿದ ರೀತಿ ನಮ್ಮನ್ನು ಪುಳಕಿತಗೊಳಿಸಿತು. ನಿಜವಾಗಿಯೂ ನಾನು ಇದರ ನಿರೀಕ್ಷೆ ಮಾಡಿರಲಿಲ್ಲ. ತುಂಬಾ ಖುಷಿಯಾಯಿತು.

– ಜನಾರ್ದನ, ಉಜಿರೆ.

ಹುಟ್ಟಿದ ಮೇಲೆ ಸಾವು ಖಚಿತ. ಹುಟ್ಟಿದ ಮೇಲೆ ಏನಾದರೂ ಸಾಧಿಸಲೇಬೇಕು. ಈ ಶಿಬಿರದಲ್ಲಿ ಹಾಜರಿದ್ದ ಎಲ್ಲ ಯುವಕರು ಆಧ್ಯಾತ್ಮಿಕ ವಿಚಾರದ ಬಗ್ಗೆ ಜ್ಞಾನವನ್ನು ಪಡೆದುಕೊಂಡು, ಜೀವನದಲ್ಲಿ ಮಾಡಬೇಕಾದ ಕರ್ತವ್ಯದ ಬಗ್ಗೆ ಸತತ ಪ್ರಯತ್ನವನ್ನು ಮಾಡಿದರೆ ಗುರಿ ಮುಟ್ಟುವುದರಲ್ಲಿ ಯಾವುದೇ ಸಂದೇಹವಿಲ್ಲ. ದೇಶ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತ ನಾವು ದೇಶಕ್ಕೇನು ಕೊಟ್ಟಿದ್ದೇವೆ ಎನ್ನುವುದು ಬಹಳ ಮುಖ್ಯ. ಆದರೆ ಇಂದು ಸ್ವಾರ್ಥ ಎನ್ನುವುದೇ ವ್ಯಕ್ತಿಯನ್ನು ಕಿತ್ತುತಿನ್ನುತ್ತಿರುವ ಭೂತವಾಗಿದೆ. ಆದರೆ ನಾನಾದರೋ, ಸ್ವಾರ್ಥವನ್ನು ಸ್ವಲ್ಪಮಟ್ಟಿಗೆ ಬದಿಗಿಟ್ಟು ದೇಶಕ್ಕಾಗಿ ನಿಸ್ವಾರ್ಥ ಸೇವೆ ಮಾಡುತ್ತೇನೆಂಬ ಆಶ್ವಾಸನೆಯನ್ನು ಕೊಡುತ್ತಿದ್ದೇನೆ.

ಸ್ವಾಮಿ ವಿವೇಕಾನಂದರ ಬಗ್ಗೆ ಹೇಳುವುದಾದರೆ ಅವರ ಭಕ್ತಿ ಮತ್ತು ಶ್ರದ್ಧೆ ಬಗ್ಗೆ ತಿಳಿಸುವುದು ಬಹಳಷ್ಟಿದೆ. 'ಏಳಿ, ಎದ್ದೇಳಿ' ಎಂದು ಅವರು ಹಲವು ಬಾರಿ ಕರೆಕೊಟ್ಟರೂ ಇಂದಿನ ಯುವಜನತೆ ನಿದ್ರೆಯಲ್ಲೇ ಮುಳುಗಿರುವುದು ನಮ್ಮ ದುರದೃಷ್ಟ. ವೇದ ಉಪನಿಷತ್ತುಗಳು, "ಮಾನವನೇ ಶಕ್ತನಾಗು, ದುರ್ಬಲನಾಗಬೇಡ" ಎಂದು ಹೇಳುತ್ತವೆ. ಆದರೆ ಇದನ್ನು ಯುವಜನತೆ ಅರ್ಥ ಮಾಡಿಕೊಳ್ಳುತ್ತಿಲ್ಲ. ನಾವು ಏನೇ ಮಾಡಬೇಕಾದರೂ ಮನಸ್ಸನ್ನು ಒಂದು ಕಡೆ ಕೇಂದ್ರೀಕರಿಸುವುದು ಅವಶ್ಯಕ. ಏಕಾಗ್ರತೆ ಮತ್ತು ಶ್ರದ್ಧೆಯ ಗುಣಗಳನ್ನು ಬೆಳೆಸಿಕೊಂಡು ದಿನಕ್ಕೆ ಒಂದು ಗಂಟೆಯಾದರೂ ನಾವು ಸ್ವಾಮಿ ವಿವೇಕಾನಂದರ ಬಗ್ಗೆ ಅಧ್ಯಯನ ಮಾಡಬೇಕು. ಆಮೂಲಕ ಸಮಾಜ ಪರಿವರ್ತನೆಗೆ ಬೇಕಾದ ವಿಷಯವನ್ನು ತಿಳಿದುಕೊಂಡು, ಅದನ್ನು ಮೈಗೂಡಿಸಿಕೊಂಡರೆ ಅದೇ ನಮ್ಮ ಜೀವನದ ಸಾಧನೆ. ಇಂದು ನಾವು ನಮ್ಮ ಸಂಸ್ಕೃತಿ, ಆಚಾರ ವಿಚಾರವನ್ನು ಮರೆಯುತ್ತಿದ್ದೇವೆ. ಸ್ವಾಮಿ ವಿವೇಕಾನಂದರು ಒಂದು ಮಾತನ್ನು ಹೇಳುತ್ತಾರೆ, "ಧರ್ಮವೇ ದೇಶದ ಬುನಾದಿ. ಸಂಸ್ಕೃತಿ ಮತ್ತು ಧರ್ಮ ಬಹಳ ವಿಶಿಷ್ಟವಾದ ಸಂಪತ್ತು. ನಾವು ಪಾಶ್ಚಿಮಾತ್ಯ ನಾಗರಿಕರ ಪ್ರಭಾವಕ್ಕೆ ಒಳಗಾದರೆ ಕೇವಲ ಎರಡು ಜನಾಂಗದಲ್ಲಿ 'ಧರ್ಮ' ಎನ್ನುವುದು ನಶಿಸಿಹೋಗುತ್ತದೆ" ಎಂದು. ನಿಜಕ್ಕೂ ನಮ್ಮ ರಕ್ಷಣೆಯ ಜೊತೆಗೆ ನಮ್ಮ ತಾಯಿನಾಡನ್ನು ರಕ್ಷಿಸುವುದೂ ನಮ್ಮೆಲ್ಲರ ಹೊಣೆಗಾರಿಕೆ. ನನ್ನ ಕೈಲಾದಮಟ್ಟಿಗೆ ನಾನು ಸಮಾಜದ ಒಳಿತಿಗೆ ಕೈ ಜೋಡಿಸುವುದಾಗಿ ಭರವಸೆ ಕೊಡುತ್ತಿದ್ದೇನೆ.

– ಜಗದೀಶ್ ಗಣಪತಿ ನಾಯಕ್, ಮಂಕಿ, ಹೊನ್ನಾವರ ತಾ॥

ಸ್ವಾಮಿ ವಿವೇಕಾನಂದರ ಆದರ್ಶಯುತವಾದ, ಮೌಲ್ಯದಿಂದ ಕೂಡಿದ ಸಂದೇಶಗಳನ್ನು ಯುವಕರು ಅರಿತುಕೊಳ್ಳಲು ಮಾಡಿದ ಶಿಬಿರವೇ **'ಅಖಿಲ ಕರ್ನಾಟಕ ಯುವಚೇತನ ಶಿಬಿರ.'** ಇದು ಕೇವಲ ಶಿಬಿರವಲ್ಲ; ಯುವಜನರ ಶಕ್ತಿಸಂಚಲನ. ಆಕಾಶದಷ್ಟು ಎತ್ತರ, ಸಾಗರದಷ್ಟು ವಿಶಾಲವಾದ ವಿವೇಕಾನಂದರ ಜೀವನ ಸಂದೇಶವನ್ನು ತಿಳಿಸುವುದರಲ್ಲಿ ಈ ಶಿಬಿರದ ಪಾತ್ರ ಮಹತ್ವದ್ದಾಗಿತ್ತು. ಯುವಜನತೆಯು ಇಂದು ಆಧುನಿಕತೆಯ ಭೂತಕ್ಕೆ ಮಾರುಹೋಗಿ ಭಾರತೀಯ ಸಂಸ್ಕೃತಿಯ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದ್ದಾರೆ, ಸಮಾಜದಲ್ಲಿ ಯಾವ ರೀತಿಯಲ್ಲಿ ಬದುಕಬೇಕೆಂಬ ಅರಿವಿಲ್ಲದೆ ಜನರ ಗೇಲಿಗೆ ಒಳಗಾಗುತ್ತಿದ್ದಾರೆ. ವ್ಯಕ್ತಿತ್ವ ವಿಕಸನ, ನೈತಿಕ ಶಿಕ್ಷಣ, ಆಧ್ಯಾತ್ಮಿಕತೆಯ ಶಿಕ್ಷಣವನ್ನು ಕೇವಲ ಮೂರು ದಿವಸಗಳ ಶಿಬಿರದಲ್ಲಿ ತಿಳಿಸಲಾಯಿತು. ಅಹಾ! ಎಂಥಾ ಅದ್ಭುತ ಕ್ಷಣವದು! ನನಗಂತೂ ಈ ಶಿಬಿರವು ಅತ್ಯಂತ ಸುಮಧುರವಾಗಿತ್ತು.

– ರಂಜಿತ್ ಆರ್, ಕಾರ್ಕಳ.

ಶಿಬಿರದ ಕುರಿತು ಸ್ಪಷ್ಟ ಪರಿಕಲ್ಪನೆಯಿದ್ದರೂ ಅಲ್ಲಿನ ವೇಳಾಪಟ್ಟಿ ನನ್ನ ಮಟ್ಟಿಗೆ ಹೊಸದಾಗಿತ್ತು. ಹಾಗಾಗಿ ಮೊದಮೊದಲಿಗೆ ಅದು ಸವಾಲೆನ್ನಿಸಿತು. ಅನಂತರ ಅದರಲ್ಲಿ ಬಹಳಷ್ಟು ಯಶಸ್ವಿಯಾದೆ, ಮೌನ ಮತ್ತು ಶಾಂತಿಗಳಿಂದ ಕೂಡಿದ ಆಶ್ರಮದ ವಾತಾವರಣ

ತಾವು ಮಹತ್ವಾಕಾಂಕ್ಷೆಯಿಂದ ನಡೆಸಿದ 'ಯುವಚೇತನ ಶಿಬಿರ'ದ ಬಗ್ಗೆ ಬರೆಯಲು ನನಗೆ ತುಂಬಾ ಸಂತೋಷವಾಗುತ್ತಿದೆ. ಒಂದೆಡೆ, ಗೊತ್ತುಗುರಿಯಿಲ್ಲದೆ ಸಾಗುತ್ತಿರುವ ಯುವಜನತೆ, ಇನ್ನೊಂದೆಡೆ ಭ್ರಷ್ಟಹಾದಿ ಹಿಡಿದು ಸಾಗುತ್ತಿರುವ ರಾಜಕೀಯ ರಂಗ – ಇವೆರಡೂ ನಮ್ಮ ದೇಶವನ್ನು ಅಧೋಗತಿಗೆ ಸಾಗಿಸುತ್ತಿವೆ. ನಮ್ಮ ದೇಶ ಅತ್ಯುತ್ತಮ ಮಾನವ ಸಂಪನ್ಮೂಲವನ್ನು ಹೊಂದಿದ್ದರೂ ಅದನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಇನ್ನೂ ಸಾಧ್ಯವಾಗುತ್ತಿಲ್ಲ. ಯುವಜನರು ಜಡತೆಯನ್ನು ಅನುಭವಿಸುತ್ತಿದ್ದಾರೆ; ತಮ್ಮಲ್ಲೇ ಇರುವ ಬುದ್ಧಿಸಂಪತ್ತು, ಭಾವಸಂಪತ್ತು, ಮತ್ತು ಆತ್ಮಶ್ರೀಮಂತಿಕೆಯನ್ನು ಸಮರ್ಪಕವಾಗಿ ಗಳಿಸಿಕೊಳ್ಳದೆ, ಸ್ವಾರ್ಥಿಗಳಾಗಿ, ವಿಲಾಸಿಗಳಾಗಿ, ವಿಚಾರಶೂನ್ಯರಾಗಿ ಮಾರ್ಪಡುತ್ತಿದ್ದಾರೆ. ಇಂದಿನ ಜಾಗತಿಕ ಮಟ್ಟದ ಸ್ಪರ್ಧೆಯ ಸಂದರ್ಭದಲ್ಲಿ ದೀನದಲಿತರು ಹಾಗೂ ದುರ್ಬಲರಿಗೆ ಕರುಣೆ ತೋರಿಸುವ ನಿಸ್ವಾರ್ಥ ಮನಸ್ಸುಗಳು ಕಡಮೆಯಾಗುತ್ತಿವೆ. ಭಾರತೀಯರನ್ನು ಜಾಗತಿಕ ಮಾರುಕಟ್ಟೆಯೇ ನಿಯಂತ್ರಿಸಿ, ಕೊಳ್ಳುಬಾಕ ಸಂಸ್ಕೃತಿಯನ್ನು ಅವರ ಮನಸ್ಸುಗಳಲ್ಲಿ ಬಿತ್ತಲಾಗುತ್ತಿದೆ. ಒಂದು ಕಾಲದಲ್ಲಿ ಆಂತರಿಕ ಸೌಂದರ್ಯಕ್ಕೆ ಮಹತ್ವ ನೀಡುತ್ತಿದ್ದ ದೇಶವು ಇಂದು, ಐಹಿಕ ವಿಲಾಸಗಳಲ್ಲಿ ಮಗ್ನವಾಗುವ ಕನಸನ್ನು ಕಾಣುತ್ತಿದೆ. ಆಧ್ಯಾತ್ಮಿಕ ಮೌಲ್ಯಗಳು ಮರೆಯಾಗಿ ಮೌಢ್ಯ ಆಚರಣೆಗಳು ಹೆಚ್ಚಾಗುತ್ತಿವೆ.

ಈ ಸಂದರ್ಭದಲ್ಲಿ ತಾವು ಆಯೋಜಿಸಿದ 'ಅಖಿಲ ಕರ್ನಾಟಕ ಯುವಚೇತನ ಶಿಬಿರ' ಅರ್ಥಪೂರ್ಣವಾಗಿತ್ತು. ಯುವಕರಲ್ಲಿ ಸುಪ್ತವಾಗಿ ಅಡಗಿದ್ದ ಚೈತನ್ಯವನ್ನು ಪ್ರಕಟಣೆಗೊಳ್ಳುವಂತೆ ಮಾಡುವ ಒಂದು ಪ್ರೇರಕಶಕ್ತಿಯಾಗಿ ಈ ಶಿಬಿರ ಕೆಲಸ ಮಾಡಿತು. ಕರ್ನಾಟಕದ

ವಿವಿಧ ಜಿಲ್ಲೆಗಳ ಯುವಕರೆಲ್ಲರನ್ನೂ ಒಂದೇ ವೇದಿಕೆಯಲ್ಲಿ ಒಟ್ಟುಗೂಡಿಸಿದ್ದು ನಿಜವಾಗಿಯೂ ಒಂದು ಮಹತ್ಸಾಧನೆ. ಕಾರ್ಯಕ್ರಮಗಳು ಹಾಗೂ ಪೂರ್ವನಿಯೋಜಿತ ವ್ಯವಸ್ಥೆಗಳನ್ನಂತೂ ಶ್ಲಾಘಿಸಲೇಬೇಕು.

ಇನ್ನು ಶ್ರೀರಾಮಕೃಷ್ಣ ಆಶ್ರಮದ ಸುಂದರ ಪರಿಸರ, ತೋಟದಲ್ಲಿದ್ದ ವೈವಿಧ್ಯಮಯ ಹೂವುಗಳು, ಧ್ಯಾನಮಂದಿರ – ಇವೆಲ್ಲ ನಮ್ಮ ಹೃದಯದಲ್ಲಿ ಶಾಂತಿ ಮತ್ತು ಸ್ಥಿರತೆಯ ಮುದ್ರೆಯನ್ನೊತ್ತಿದವು. ಶಿಬಿರದ ಮೂರು ದಿನಗಳಲ್ಲಿಯೂ ಬೇರಾವುದೇ ಯೋಚನೆಗಳಿಲ್ಲದೆಯೇ ನಿರಂತರ ಚಟುವಟಿಕೆಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಲು ಅವಕಾಶವಾಯಿತು. ಶಿಬಿರದಲ್ಲಿ ನಡೆಸಿಕೊಟ್ಟ ಮಾರ್ಗದರ್ಶಿತ ಧ್ಯಾನ ಮತ್ತು ಭಜನೆಗಳು ನಿಜವಾಗಿಯೂ ಮನಸ್ಸಿನ ಮೇಲೆ ಉತ್ತಮ ಪರಿಣಾಮಗಳನ್ನು ಬೀರಿವೆ. ಆತ್ಮನಿರೀಕ್ಷಣೆಯ ಪಥ ಮತ್ತು ಮನೋನಿಗ್ರಹದ ತಂತ್ರಗಳು ನಮ್ಮನ್ನು ಇಂದ್ರಿಯಗಳ ದಾಸರಂತೆ ವರ್ತಿಸುವುದರಿಂದ ದೂರ ಉಳಿಯುವಂತೆ ಮಾಡಿವೆ. ನನಗೆ ಮೊದಲಿನಿಂದಲೂ ಧ್ಯಾನದ ಮೇಲೆ ಆಸಕ್ತಿಯಿತ್ತು. ಈ ಶಿಬಿರದಲ್ಲಿ ಧ್ಯಾನದ ಬಗೆಗಿನ ಇನ್ನಷ್ಟು ವಿಧಾನಗಳನ್ನು ತಿಳಿಸಿದರು. ಧ್ಯಾನಮಂದಿರದಲ್ಲಿ ಶ್ರೀರಾಮಕೃಷ್ಣರ ಚಿತ್ರದ ಮುಂಭಾಗದಲ್ಲಿ ಕರ್ನಾಟಕದ ವಿವಿಧ ಮೂಲೆಗಳ ಬಿಸಿನೆತ್ತರಿನ ಯುವಕರೆಲ್ಲರೂ ಒಟ್ಟಾಗಿ 'ಓಂಕಾರ'ವನ್ನು ಉಚ್ಚರಿಸಲು ಭಗವತ್‌ಸಂಕಲ್ಪವೇ ಕಾರಣವೆಂದು ನನ್ನ ಅನಿಸಿಕೆ. ಸಾಮೂಹಿಕ ಭಜನೆಯು ಮನಸ್ಸಿನ ಅಹಂಕಾರದ ಕೋಟೆಯನ್ನು ಕೆಡವಿಹಾಕಿತು ಹಾಗೂ ಆಮೂಲಕ ನಮ್ಮೆಲ್ಲರಲ್ಲೂ ಏಕತೆಯ ಭಾವನೆಯನ್ನು ಮೂಡಿಸಿತು. ಕವಿವಾಣಿಯೊಂದು ಹೀಗೆ ಹೇಳುತ್ತದೆ: "ಮಹಿಮೆಯ ಜೀವಿತವದು ಒಂದು ಕ್ಷಣವಾದರೇನು, ಬರೀ ಜೀವನ ಯುಗಯುಗಗಳಿದ್ದರೇನು." ಅಂತಹ ಮಹಿಮೆಯ ಜೀವನವನ್ನು ನಡೆಸಲು ಸ್ಫೂರ್ತಿಯನ್ನು ನೀಡಿದ ವಿವೇಕ ಯುವಚೇತನ ಶಿಬಿರವು ನಮ್ಮೆಲ್ಲರ ವಿವೇಕವನ್ನೂ, ಚೈತನ್ಯವನ್ನೂ ಜಾಗೃತಗೊಳಿಸಿದೆಯೆಂದು ಖಂಡಿತವಾಗಿ ಹೇಳುತ್ತ ಸಮಸ್ತರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

– ಪ್ರೀತಮ್ ಎಸ್. ತೀರ್ಥಹಳ್ಳಿ

## ಸಮಾರೋಪ ಸಮಾರಂಭ
# ಯುವ ಶಿಬಿರಾರ್ಥಿಗಳಿಗೆ ಕಿವಿಮಾತು

ಸ್ವಾಮಿ ಮುಕ್ತಿದಾನಂದ

**ಆತ್ಮಪರಿವರ್ತನೆಯ ಮಾರ್ಗ:** ನಮಗಿಂದು ಬೇಕಾಗಿರುವುದು ಆತ್ಮಪರಿವರ್ತನೆಯ ಮಾರ್ಗ, ಸಮಾಜವನ್ನು ಪರಿವರ್ತಿಸುವ ಶಕ್ತಿ. ಎಲ್ಲರನ್ನೂ ಪ್ರೀತಿಸುವ ಮತ್ತು ಇತರರ ದೋಷಗಳನ್ನು ಕ್ಷಮಿಸುವ ಶಕ್ತಿಯನ್ನು ನಾವಿಂದು ಅತ್ಯಗತ್ಯವಾಗಿ ಬೆಳೆಸಿಕೊಳ್ಳಬೇಕಾಗಿದೆ. ಇದಕ್ಕೆ ಅವಶ್ಯಕವಾದ ಮಾರ್ಗದರ್ಶನವನ್ನು ನಾವು ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು ಮತ್ತು ಸಕಲ ಸಂತರ ಮಹಾತ್ಮರ ಜೀವನ ಮತ್ತು ಸಂದೇಶದಿಂದ ಪಡೆಯಬಹುದು. ಇದನ್ನು ನಾವು ಸ್ವಾಧ್ಯಾಯ, ನಿತ್ಯ ಅಭ್ಯಾಸ ಮತ್ತು ಸತ್ಸಂಗದಿಂದ ಮಾತ್ರ ಪಡೆಯಲು ಸಾಧ್ಯ.

**ಅಧ್ಯಾತ್ಮ-ವಿಜ್ಞಾನದ ಮಹತ್ವ:** ನಮ್ಮ ದೇಶದ ಪರಿಸ್ಥಿತಿಯನ್ನು ಸುಧಾರಿಸಲು, ನಮ್ಮ ಸಮಾಜದಲ್ಲಿ ಕಂಡುಬರುವ ದೋಷ ಮತ್ತು ವಿಕೃತಿಯನ್ನು ನಿವಾರಿಸಲು, ಇವೆಲ್ಲದರ ಮೂಲಕಾರಣ ಏನೆಂದು ಅನ್ವೇಷಿಸುವುದು ಅತ್ಯಗತ್ಯ. ವಿಜ್ಞಾನವು ನಮ್ಮ ಜೀವನಕ್ಕೆ ಅಗತ್ಯವಾದ ಸವಲತ್ತುಗಳನ್ನು ಕೊಡಬಲ್ಲದು. ಆದರೆ ಅಧ್ಯಾತ್ಮವು ನಮ್ಮ ದೇಶದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳನ್ನು ಸುಧಾರಿಸಲು ಮಾರ್ಗದರ್ಶನ ನೀಡುತ್ತದೆ. ಸಾಮಾಜಿಕ ವಿಜ್ಞಾನ, ಮನುಷ್ಯನ ಸ್ವಭಾವ, ಮನಸ್ಸಿನ ರಚನೆ ಮತ್ತು ಸಾಮರ್ಥ್ಯವನ್ನು ಸರಿಯಾಗಿ ತಿಳಿಯುವುದು ನಮಗೆ ಅತ್ಯಗತ್ಯ. ಈ ವಿಷಯಗಳ ಮೇಲೆ ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿರುವ ಅಧ್ಯಾತ್ಮ-ವಿಜ್ಞಾನವು ನಮಗೆ ದಾರಿದೀಪವಾಗಿದೆ. ಅವುಗಳ ಅಧ್ಯಯನದಿಂದ ನಮ್ಮ ಜ್ಞಾನದಿಗಂತವು ವಿಸ್ತಾರವಾಗುತ್ತದೆ. ಸ್ವಾಮಿ ವಿವೇಕಾನಂದರು ವಿಶ್ವಮಾನ್ಯತೆ ಪಡೆದ ಒಬ್ಬ ಅತ್ಯಂತ ಶ್ರೇಷ್ಠ ಸಾಮಾಜಿಕ ಚಿಂತಕ, ಮನೋವಿಜ್ಞಾನಿ ಮತ್ತು ಆಧ್ಯಾತ್ಮಿಕ ವಿಭೂತಿಪುರುಷರಾಗಿದ್ದಾರೆ. ಇವರ ಜೀವನ ಸಂದೇಶವನ್ನು ಸಮಗ್ರವಾಗಿ ಅರಿಯುವುದು ವ್ಯಕ್ತಿಯ, ಸಮಾಜದ ಮತ್ತು ಇಡೀ ಜಗತ್ತಿನ ಪರಿವರ್ತನೆಗೆ ಅತ್ಯಂತ ಸಹಾಯಕಾರಿ.

**ನಮ್ಮ ಜೀವನದ ಗುರಿ:** ನಮ್ಮಲ್ಲಿರುವ ಭಾವನಾಶಕ್ತಿಯ ಸಾಮರ್ಥ್ಯವು ಅಸಾಧಾರಣವಾದುದು. ಅದನ್ನು ಅಲ್ಪ ವಿಷಯಗಳಿಂದ ಹಿಂತೆಗೆದು ಪರಿಶುದ್ಧಗೊಳಿಸಬೇಕು. ನಂತರ ಜ್ಞಾನವೃದ್ಧಿಗಾಗಿ ಮತ್ತು ಸಾಮಾಜಿಕ ಸೇವೆಗಾಗಿ ಅದನ್ನು ಬಳಸಿದಾಗ ನಮ್ಮ ಆತ್ಮವಿಕಾಸವು ಅದ್ಭುತವಾಗಿ ಸಾಧಿತವಾಗುತ್ತದೆ. ನಮಗಿಂದು ಬೇಕಾಗಿರುವುದು ಎಲ್ಲರನ್ನೂ ಒಟ್ಟುಗೂಡಿಸುವ, ಸರ್ವಜನಹಿತವನ್ನು ಬಯಸುವ ತಾಯ್ತನದ ಒಂದು ಶಕ್ತಿ. ಇದಕ್ಕೆ ಅಪರಿಮಿತ ತಾಳ್ಮೆ, ಸರಿಯಾದ ಜ್ಞಾನ ಮತ್ತು ಮನಸ್ಸಿನ ನಿಗ್ರಹ ಅಗತ್ಯ. ತನ್ಮೂಲಕ ಇತರರ ಮನಸ್ಸನ್ನು ಪ್ರೀತಿವಿಶ್ವಾಸದಿಂದ ಪರಿವರ್ತಿಸುವ ತರಂಗಗಳನ್ನು ನಮ್ಮ ಮನಸ್ಸಿನಲ್ಲಿಯೇ ನಿರ್ಮಿಸಬಹುದು. ಆದ್ದರಿಂದ ನಮ್ಮ ಜೀವನವನ್ನು ಸದ್ಗುಣಗಳು, ಆತ್ಮಸಂಯಮ ಮತ್ತು ಶಿಸ್ತಿನಿಂದ ನಿರ್ವಹಿಸುವುದು ಅಗತ್ಯ. ಹೀಗಾಗಿ, ನೂರು ಬಾರಿ ತಪ್ಪಿದರೂ ಅಂಜದೆ, ಬೆದರದೆ ಆತ್ಮವಿಶ್ವಾಸದಿಂದ ಗುಣಸಂಪನ್ನರಾಗಿ ಬಾಳಲು ಪ್ರಾಮಾಣಿಕವಾಗಿ ಪ್ರಯತ್ನಿಸೋಣ.

ಆಧ್ಯಾತ್ಮಿಕತೆ ಎಂದರೆ ನಮ್ಮ ವ್ಯಕ್ತಿತ್ವದಲ್ಲಿ ಹುದುಗಿರುವ ಅಮರತ್ವದ ಅಥವಾ ಸತ್ಯದ ಶೋಧನೆ ಮತ್ತು ಸೃಷ್ಟಿಕರ್ತನಾದ ಭಗವಂತನ ಸಾಕ್ಷಾತ್ಕಾರ. ಇವೆರಡನ್ನೂ ಅರ್ಥೈಸಿ, ಬೆಸೆಯುವ ಸೂತ್ರವೇ ಅಧ್ಯಾತ್ಮ. ನಮ್ಮ ಭಾರತೀಯ ಸಂಸ್ಕೃತಿಯ ಸಾರವಾದ ಈ ಅಧ್ಯಾತ್ಮ-ವಿಜ್ಞಾನವನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು; ನಾವೆಲ್ಲರೂ ಅಧ್ಯಾತ್ಮವಿಜ್ಞಾನಿಗಳಾಗಿ ಬೆಳೆಯಬೇಕು. ಇದು ಬರಿಯ ಮಾತಿನಿಂದ ಸಾಧ್ಯವಿಲ್ಲ. ಪ್ರಾಮಾಣಿಕ ಅನುಷ್ಠಾನದಿಂದ, ಶಿಸ್ತಿನ ಜೀವನದಿಂದ, ಆತ್ಮಪರಿವರ್ತನೆಯ ಹಂಬಲದಿಂದ ಮತ್ತು ಭಗವಂತನನ್ನು ಪ್ರೀತಿಸಿ ಬಾಳುವುದರಿಂದ ಮಾತ್ರ ಇದು ಸಾಧ್ಯ.